ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

## ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ:ಸಿ3(7)ಪ್ರಾ.ಶಿ. ವರ್ಗ-07/2017-18 ದಿನಾಂಕ: 06/08/2018

**: ಜ್ಞಾಪನ :**

ವಿಷಯ:- 2017-18 ನೇ ಸಾಲಿನ ಸರ್ಕಾರಿ ಪ್ರಾಥಮಿಕ ಹಾಗು ಪ್ರೌಢಶಾಲಾ ಶಿಕ್ಷಕರ ವೃಂದದ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ ಪರಿಷ್ಕೃತ ವೇಳಾಪಟ್ಟಿ- ಹೆಚ್ಚುವರಿ ಶಿಕ್ಷಕರ ಮರು ನಿಯುಕ್ತಿ ಕ್ರಮಗಳು, ಕಡ್ಡಾಯ ವರ್ಗಾವಣೆ ಹಾಗು ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಳ ಕುರಿತಂತೆ ವೇಳಾಪಟ್ಟಿ.

ಉಲ್ಲೇಖ:- 1) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2017 (ಸರ್ಕಾರದ ಅಧಿಸೂಚನೆ : ಸಂವ್ಯಶಾಇ 22 ಶಾಸನ 2017 ದಿನಾಂಕ 18/04/2017)

2) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2017 (ಸರ್ಕಾರದ ಅಧಿಸೂಚನೆ ಇಡಿ 12 ಇಟಿಆರ್ 2017 ದಿನಾಂಕ 29/11/2017)

3) ಸರ್ಕಾರದ ಆದೇಶ ಸಂಖ್ಯೆ ಇಡಿ 626 ಪಿಬಿಎಸ್ 2014 ದಿನಾಂಕ 19/05/2017 (ವೃಂದ ಬಲದ ಆದೇಶ)

4) ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 626 ಪಿಬಿಎಸ್ 2014 ದಿನಾಂಕ 07/08/2017 (ವೃಂದ ಮತ್ತು ನೇಮಕಾತಿ ಅಧಿಸೂಚನೆ)

5) ಈ ಕಛೇರಿ ಅಧಿಸೂಚನೆ ಸಂಖ್ಯೆ ಸಿ3(1) ವೃಂದ ಬಲ.ಜಿಲ್ಲಾ ಹಂ / 2017-18 ದಿನಾಂಕ 02/02/2018

6) ಪ್ರಾಥಮಿಕ ಹಾಗು ಪ್ರೌಢಶಾಲಾ ಶಿಕ್ಷಕರ ವರ್ಗಾವಣಾ ವೇಳಾಪಟ್ಟಿ ಜ್ಞಾಪನ ಸಂಖ್ಯೆ: ಸಿ3(7) ಪ್ರಾ.ಶಾ.ಶಿ ವರ್ಗ-07/2017-18 ದಿನಾಂಕ: 29/12/2017, 06/01/2018, 19/01/2018, 09/02/2018, 24/02/2018, 13/03/2018 ಹಾಗು ಸಿ4(7) ಪ್ರೌಶಿವರ್ಗ 29 2017-18 ದಿನಾಂಕ 01/01/2018, 06/01/2018, 19/01/2018, 25/01/2018, 13/03/2018

7) ಆಯುಕ್ತರ ಅಧ್ಯಕ್ಷತೆಯಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ದಿನಾಂಕ 16/07/2018, 01/08/2018 ಹಾಗು 03/08/2018ರಲ್ಲಿ ನಡೆದ ಸಭೆಗಳು

8) ಏಕ ಕಡತ ಸಂಖ್ಯೆ ಸಿ3(7) ಪ್ರಾಶಾಶಿ ವರ್ಗಾ-7 2017-18 ರಲ್ಲಿ ಸರ್ಕಾರದ ಅನುಮತಿ ಆದೇಶ ದಿನಾಂಕ 03/08/2018

---*****---

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (6)ರ ಜ್ಞಾಪನಗಳಲ್ಲಿ ಪ್ರಾಥಮಿಕ ಹಾಗು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಗೆ ಮಾರ್ಗಸೂಚಿ ಸಹಿತ ವೇಳಾಪಟ್ಟಿಯನ್ನು ಹೊರಡಿಸಲಾಗಿತ್ತು. ಚುನಾವಣೆ ನೀತಿ ಸಂಹಿತೆ ಕಾರಣದಿಂದ ಮತ್ತು ನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾಗಿದ್ದರಿಂದಾಗಿ ಸದರಿ ವೇಳಾಪಟ್ಟಿಯಂತೆ ಕ್ರಮಗಳು ಜರುಗಿರುವುದಿಲ್ಲ. ಇದೀಗ ಕೆಳಗಿನಂತೆ ವೇಳಾಪಟ್ಟಿಯನ್ನು ಪರಿಷ್ಕರಿಸಿದೆ. ಕೆಳಗಿನಂತಿರುವ ಸೂಚನೆಗಳ ಜೊತೆಗೆ ಉಲ್ಲೇಖಿತ ಜ್ಞಾಪನಗಳಲ್ಲಿನ ಎಲ್ಲಾ ಸೂಚನೆಗಳು/ ಮಾರ್ಗಸೂಚಿಗಳು ಯಥಾ ಮುಂದುವರೆಯುತ್ತವೆ.

ಪ್ರಸ್ತುತ ಜಾರಿಗೊಳಿಸಲಾಗಿರುವ ವರ್ಗಾವಣೆ ಕಾಯ್ದೆ ಹಾಗೂ ನಿಯಮಗಳು ಶಿಕ್ಷಕ ಸ್ನೇಹಿ ನೀತಿಯನ್ನು ಹೊಂದಿವೆ. ಈ ಹಿಂದೆ ಘಟಕದ ಒಳಗೆ ಮತ್ತು ಹೊರಗಿನ ಒಟ್ಟು ವರ್ಗಾವಣಾ ಮಿತಿ ಶೇ.8 ರಿಂದ ಇದೀಗ

Scanned by CamScanner

ಶೇ 15 ಕ್ಕೆ ಹೆಚ್ಚಿಸಿದೆ. ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ ನಿಯಮಗಳನ್ವಯ ಮಕ್ಕಳ ದಾಖಲಾತಿಗೆ ಅನುಸಾರವಾಗಿ ಶಿಕ್ಷಕರನ್ನು ಲಭ್ಯಪಡಿಸಲು ಮರುಹೊಂದಾಣಿಕೆ ಕ್ರಮಗಳನ್ನು ಕೈಗೊಂಡು ಶಿಕ್ಷಕರ ಕೊರತೆ ಇರುವ ಅನೇಕ ಶಾಲೆಗಳಿಗೆ ಶಿಕ್ಷಕರನ್ನು ನೀಡಲಾಗುತ್ತಿದೆ. ಬಹಳಷ್ಟು ವರ್ಷಗಳ ಕಾಲ ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ನಗರ ಪ್ರದೇಶಕ್ಕೆ ವರ್ಗಾವಣೆ ಕೋರುವ ಮತ್ತು ಹೊಂದುವ ಅವಕಾಶವನ್ನು ಕಲ್ಪಿಸಲಾಗಿದೆ. ಅರ್ಜಿ ಸಲ್ಲಿಸುವುದಕ್ಕೆ ಶಿಕ್ಷಕರ ದತ್ತಾಂಶದಿಂದ ಮಾಹಿತಿಗಳನ್ನು ಪಡೆಯಲಾಗಿದೆ. ಅರ್ಜಿಗಳ ಪರಿಶೀಲನೆ ಕ್ರಮಗಳನ್ನೂ ಸಹ ತಂತ್ರಾಂಶದಲ್ಲಿ ಕೈಗೊಳ್ಳಲಾಗುತ್ತಿದ್ದು, ಪರಿಶೀಲನಾ ಕ್ರಮಗಳನ್ನು ಸರಳೀಕರಿಸಲಾಗಿದೆ.

**ಅ) ಪ್ರಾಥಮಿಕ ಶಾಲಾ ಶಿಕ್ಷಕರ ವೃಂದಕ್ಕೆ ಸಂಬಂಧಪಟ್ಟಂತೆ :**

ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಪಟ್ಟಂತೆ ದಿನಾಂಕ 02/02/2018ರ ಕಛೇರಿ ಅಧಿಸೂಚನೆಯಂತೆ ಶಾಲಾವಾರು ವಿಷಯಗಳ ಹುದ್ದೆಗಳ ಹಂಚಿಕೆ ನಂತರದಲ್ಲಿ ಹೆಚ್ಚುವರಿ ಮತ್ತು ಅಗತ್ಯತೆಯನ್ನು ಗುರುತಿಸಲು ಉಪನಿರ್ದೇಶಕರುಗಳು ಮತ್ತು ಕ್ಷೇತ್ರಶಿಕ್ಷಣಾಧಿಕಾರಿಯವರುಗಳು ತುರ್ತಾಗಿ ಕ್ರಮವಹಿಸತಕ್ಕದ್ದು. ಇದೇ ವಿಷಯದಲ್ಲಿ ದಿನಾಂಕ 30/06/2018ರ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಉಪನಿರ್ದೇಶಕರುಗಳ ಸಭೆಯಲ್ಲಿ ಸ್ಯಾಟ್ಸ್ (ಡೈಸ್) ಶಾಖೆಯಿಂದ ಜಿಲ್ಲಾವಾರು, ಶಾಲಾವಾರು ಹುದ್ದೆಗಳ ಪ್ರಾತ್ಯಕ್ಷಿಕೆಯನ್ನು ಪ್ರಸ್ತುತಪಡಿಸಿ ಚರ್ಚಿಸಲಾಗಿದೆ. ಎಕ್ಸೆಲ್ ಮಾದರಿಯಲ್ಲಿ ಆಯಾ ಜಿಲ್ಲೆಗಳ ಶಾಲಾವಾರು ಹುದ್ದೆ ಹಂಚಿಕೆ ಮಾದರಿಯನ್ನು ಇಲಾಖಾ ವೆಬ್-ಸೈಟ್‌ನಲ್ಲಿ ಸೂಚನೆಗಳ ಸಹಿತವಾಗಿ ಈಗಾಗಲೇ ಪ್ರಕಟಿಸಲಾಗಿದೆ.

ಇದೀಗ 2018-19ನೇ ಸಾಲು ಚಾಲ್ತಿಯಲ್ಲಿದ್ದು ಕರ್ನಾಟಕ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ)(ತಿದ್ದುಪಡಿ) ನಿಯಮ-2017 ರ ನಿಯಮ-4 ರ ಪ್ರಕಾರ ವರ್ಗಾವಣೆಗೂ ಮುಂಚಿತವಾಗಿ ಎರಡು ವರ್ಷಕ್ಕೊಮ್ಮೆ ಹೆಚ್ಚುವರಿ ಶಿಕ್ಷಕರ ಮರು ನಿಯುಕ್ತಿಗೊಳಿಸುವ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಅದರಂತೆ ಉಲ್ಲೇಖಿತ ಜ್ಞಾಪನಗಳನ್ನು ಮುಂದುವರೆಸುತ್ತಾ ಹೆಚ್ಚುವರಿ, ಕಡ್ಡಾಯ, ಕೋರಿಕೆ ಮತ್ತು ಪರಸ್ಪರ ವರ್ಗಾವಣೆ ಕುರಿತ ಸಮಗ್ರ ಪರಿಷ್ಕೃತ ಮಾರ್ಗಸೂಚಿಗಳು ಹಾಗೂ ವೇಳಾಪಟ್ಟಿಯನ್ನು ಕೆಳಗೆ ಪ್ರಕಟಿಸಿದೆ.

ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲಾ ಹೆಚ್ಚುವರಿ ಶಿಕ್ಷಕರ ಸ್ಥಳನಿಯುಕ್ತಿ ಕ್ರಮಗಳ ಕುರಿತಂತೆ ಈ ಹಿಂದೆ ಚಾಲ್ತಿಯಲ್ಲಿದ್ದಿರಬಹುದಾದ ಎಲ್ಲಾ ಸೂಚನೆಗಳು ರದ್ದಾಗುತ್ತವೆ ಮತ್ತು 'ಶಿಕ್ಷಕರ ವರ್ಗಾವಣಾ ನಿಯಮಗಳು – 2017'ರಲ್ಲಿನ ಅವಕಾಶಗಳಂತೆ ಹೆಚ್ಚುವರಿ ಶಿಕ್ಷಕರ ಸ್ಥಳ ನಿಯುಕ್ತಿ ಕ್ರಮಗಳ ಬಗ್ಗೆ ಕೆಳಗಿನ ನೀತಿ ಅಂಶಗಳನ್ನು ಹೊಂದಲಾಗಿದೆ. ದಿನಾಂಕ 19/05/2017ರ ಸರ್ಕಾರದ ವೃಂದ ಬಲದ ಆದೇಶ, ದಿನಾಂಕ 07/08/2017ರ ಪ್ರಾಥಮಿಕ ಶಾಲಾ ಶಿಕ್ಷಕರ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗು ದಿನಾಂಕ 02/02/2018ರ ಇಲಾಖಾ ಅಧಿಸೂಚನೆಯ ಅಂಶಗಳಂತೆ ಪ್ರಸ್ತುತದ ನೀತಿಯನ್ನು ಅಳವಡಿಸಿಕೊಳ್ಳಲಾಗಿದೆ.

**ನೀತಿ ಅಂಶಗಳು :**

1. ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿಯೂ 1-5 ನೇ ತರಗತಿಗಳಿಗೆ, 10ಕ್ಕಿಂತ ಕಡಿಮೆ ದಾಖಲಾತಿ ಇರುವಲ್ಲಿ 01 ಹುದ್ದೆಯನ್ನೂ ಮತ್ತು ಉಳಿದ ಶಾಲೆಗಳಿಗೆ ಕನಿಷ್ಠ 2 ಹುದ್ದೆಗಳನ್ನು ನೀಡಲಾಗಿದೆ. 1ನೇ ಹುದ್ದೆಯು ಭಾಷೆ ವರ್ಗೀಕರಣದ ಹುದ್ದೆ ಮತ್ತು 2 ನೇ ಹುದ್ದೆಯು ವಿಜ್ಞಾನ-ಗಣಿತ ವರ್ಗೀಕರಣದ ಹುದ್ದೆಯಾಗಿದ್ದು, ಸದರಿ ವಿಷಯದ ಹುದ್ದೆಗೆ ಹೊಂದಾಣಿಕೆಯಾಗುವ ಶಿಕ್ಷಕರನ್ನು ನೀಡಲಾಗಿದೆ.
2. ಹಾಗೆಯೇ, 6 ರಿಂದ 7/8ನೇ ತರಗತಿಗಳಿಗೆ ಕನಿಷ್ಠ 2/3 ಹುದ್ದೆಗಳನ್ನು ನೀಡಲಾಗಿದ್ದು 1ನೇ ಹುದ್ದೆಯು ಭಾಷೆ ವರ್ಗೀಕರಣದ ಹುದ್ದೆ ಮತ್ತು 2 ನೇ ಹುದ್ದೆಯು ವಿಜ್ಞಾನ-ಗಣಿತ ವರ್ಗೀಕರಣದ ಮತ್ತು 3ನೇ ಹುದ್ದೆಯು ಸಮಾಜ-ಪಾಠಗಳು ಹುದ್ದೆಯಾಗಿದ್ದು, ಸದರಿ ವಿಷಯ ಹುದ್ದೆಗೆ ಹೊಂದಾಣಿಕೆಯಾಗುವ ಶಿಕ್ಷಕರನ್ನು ನೀಡಲಾಗಿದೆ.

Scanned by CamScanner

3. ಯಾವುದೇ ಶಾಲೆಯಲ್ಲಿ 1 ರಿಂದ 7/8ನೇ ತರಗತಿಗಳಿದ್ದಲ್ಲಿ, 1 ರಿಂದ 5 ಮತ್ತು 6 ರಿಂದ 7/8ನೇ ತರಗತಿಗಳನ್ನು ಪ್ರತ್ಯೇಕ ಘಟಕಗಳೆಂದು ಪರಿಗಣಿಸಲಾಗಿದೆ. ಇದು ದಾಖಲಾತಿಗಳ ಹೊರತಾಗಿಯೂ ನೀಡಲಾಗಿರುವ ಕನಿಷ್ಠ ಸಂಖ್ಯೆ ಹುದ್ದೆಗಳಾಗಿರುತ್ತವೆ. ಮುಂದಿನ ಹಂತದಲ್ಲಿ ದಾಖಲಾತಿಯನ್ನು ಗಮನಿಸಿ ಕನಿಷ್ಠ ಸಂಖ್ಯೆಯ ಹುದ್ದೆಗಳನ್ನು ಗಣಿಸಿ ಆರ್.ಟಿ.ಇ ಕಾಯ್ದೆಯಲ್ಲಿ ಪರಿಶಿಷ್ಟದಲ್ಲಿನ (ಷೆಡ್ಯೂಲ್) ಸೂಚನೆಗಳಂತೆ ಮತ್ತು ದಿನಾಂಕ 02/02/2018ರ ಇಲಾಖಾ ಅಧಿಸೂಚನೆಗಳಂತೆ ವಿದ್ಯಾರ್ಥಿ:ಶಿಕ್ಷಕರ ಅನುಪಾತದ ನಿಯಮವನ್ನು ಪಾಲಿಸಿ ಶಿಕ್ಷಕರನ್ನು ನೀಡಲಾಗಿದೆ.

4. ಈಗಾಗಲೇ ಶಿಕ್ಷಕರ ದತ್ತಾಂಶ (ಟಿ.ಡಿ.ಎಸ್) ದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶಿಕ್ಷಕರ ಮಾಹಿತಿಯನ್ನು ಸಂಗ್ರಹಿಸಲಾಗಿದ್ದು, ಅವರ ಮೂಲ ಮತ್ತು ಹೆಚ್ಚುವರಿಯಾಗಿ ಗಳಿಸಿಕೊಂಡಿರಬಹುದಾದ ವಿದ್ಯಾರ್ಹತೆಯ ಆಧಾರದಲ್ಲಿ ಮೇಲಿನ ವರ್ಗೀಕರಣದ ಹುದ್ದೆಗಳಿಗೆ ಶಿಕ್ಷಕರನ್ನು (ಮ್ಯಾಪಿಂಗ್) ಗುರುತಿಸಲಾಗಿದೆ.

5. ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಲ್ಲಿ ಬಹುತೇಕ ಶಿಕ್ಷಕರು ಈ ಪೂರ್ವದಲ್ಲಿ ಚಾಲ್ತಿಯಲ್ಲಿದ್ದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿನ ವಿದ್ಯಾರ್ಹತೆಗೆ ಅನುಸಾರವಾಗಿ ನೇಮಕಾತಿಗೊಂಡವರಾಗಿದ್ದು ಸದರಿ ಎಲ್ಲಾ ಶಿಕ್ಷಕರನ್ನು ಅವರ ನಿವೃತ್ತಿಯವರೆಗೆ ಸರ್ಕಾರದ ಆದೇಶ ಇಡಿ 626 ಪಿಬಿಎಸ್ 2014 ದಿನಾಂಕ 19/05/2017 ರಂತೆ ಮೇಲಿನಂತಿರುವ ವಿಷಯಾಧಾರಿತ ಹುದ್ದೆಗಳಲ್ಲಿ ಮುಂದುವರೆಸಲಾಗಿದೆ.

6. ಪ್ರಯುಕ್ತ, ಶಿಕ್ಷಕ ಸಂಪನ್ಮೂಲದ ಸಮರ್ಪಕ ಬಳಕೆಗೆ ಅವರ ಆಯ್ಕೆ ಸಂದರ್ಭದ ವಿದ್ಯಾರ್ಹತೆ ಮತ್ತು ಹೆಚ್ಚುವರಿಯಾಗಿ ಗಳಿಸಿಕೊಂಡ ವಿದ್ಯಾರ್ಹತೆಯ ಆಧಾರದ ಮೇಲೆ ಆಯಾ ವಿಷಯದ (ಭಾಷೆ ಅಥವಾ ವಿಜ್ಞಾನ-ಗಣಿತ) ಹುದ್ದೆಗಳಿಗೆ (ಮ್ಯಾಪಿಂಗ್ ಮಾಡುವುದು) ಗುರುತಿಸಲಾಗಿದೆ.

7. ಮೇಲಿನಂತೆ ಪ್ರತಿ ಶಿಕ್ಷಕರನ್ನು ಆಯಾ ಹುದ್ದೆಗಳ ಎದುರಿಗೆ ಗುರುತಿಸಿದ ನಂತರ, ಶಾಲೆಗೆ ಅಗತ್ಯವಿರುವ ಕನಿಷ್ಠ ಸಂಖ್ಯೆಯ ಭಾಷೆ/ವಿಷಯದ ಹುದ್ದೆಗಳಿಗೆ ಅನುಸಾರವಾಗಿ ಆಯಾ ಹೆಚ್ಚುವರಿಯಾಗಿರುವ ಭಾಷೆ ಅಥವಾ ವಿಜ್ಞಾನ-ಗಣಿತ ಶಿಕ್ಷಕರನ್ನು ಶಾಲಾ ಜ್ಯೇಷ್ಠತೆಯನ್ನು ಆಧಾರವಾಗಿಟ್ಟುಕೊಂಡು ಕೌನ್ಸಿಲಿಂಗ್ ಮುಖಾಂತರ ಅಗತ್ಯವಿರುವ ಶಾಲೆಗಳಿಗೆ ಮೊದಲನೇ ಹಂತದಲ್ಲಿ ತಾಲ್ಲೂಕು ಮಟ್ಟದಲ್ಲಿ ಮತ್ತು ಮುಂದಿನ ಹಂತದಲ್ಲಿ ಜಿಲ್ಲಾ ಮಟ್ಟದಲ್ಲಿ ಕೌನ್ಸಿಲಿಂಗ್ ಮುಖಾಂತರವಾಗಿ ಸ್ಥಳನಿಯುಕ್ತಿಗೊಳಿಸುವುದು.

8. ಮೇಲಿನಂತೆ ಕ್ರಮಗಳನ್ನು ಕೈಗೊಳ್ಳುವಾಗ ವಿಷಯದ ಆಧಾರದಲ್ಲಿ ಒಂದು ಶಾಲೆಯಿಂದ ಹೆಚ್ಚುವರಿ ಎಂದು ಗುರುತಿಸಿ ಶಿಕ್ಷಕರನ್ನು ಬೇರೆಡೆಗೆ ಸ್ಥಳಾಂತರಗೊಳಿಸಿ ಸದರಿ ಹುದ್ದೆಯಲ್ಲಿ ಬೇರೆ ಶಾಲೆಯಿಂದ ಪ್ರಸ್ತುತ ಶಾಲೆಗೆ ಅಗತ್ಯ ವಿಷಯದ ಶಿಕ್ಷಕರನ್ನು ಸ್ಥಳ ನಿಯುಕ್ತಿಯಿಂದ ನೀಡುವುದು.

9. ಶಿಕ್ಷಕರನ್ನು ಹುದ್ದೆಗಳ ಎದುರಿಗೆ ಗುರುತಿಸುವಾಗ ಆದಷ್ಟು ಮಟ್ಟಿಗೆ ಚಾಲ್ತಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿನ ವಿದ್ಯಾರ್ಹತೆ ನಿಯಮಗಳನ್ನು ಗಮನಿಸಿ ಕ್ರಮ ಕೈಗೊಳ್ಳುವುದು. ಆದರೆ ಅಂತಹಾ ಶಿಕ್ಷಕರ ಲಭ್ಯತೆ ಇಲ್ಲದೇ ಇರುವ ಸಂದರ್ಭದಲ್ಲಿ ಮಾತ್ರ ಸಡಿಲಿಕೆಯೊಂದಿಗೆ ಹುದ್ದೆಯ ವಿಷಯದ ಅವಶ್ಯಕತೆಯನ್ನು ಗಮನಿಸಿ ಕ್ರಮಕೈಗೊಳ್ಳುವುದು.

10. ಹೆಚ್ಚುವರಿ ಶಿಕ್ಷಕರ ಸ್ಥಳ ನಿಯುಕ್ತಿ ಕ್ರಮಗಳನ್ನು ಕೈಗೊಳ್ಳುವಾಗ ಉಲ್ಲೇಖ-2 ರ ವರ್ಗಾವಣಾ ನಿಯಮಗಳಲ್ಲಿನ ಕಡ್ಡಾಯ ವರ್ಗಾವಣೆಗಳಿಗೆ ವಿಧಿಸಿರುವ ನೀತಿ-ನಿಯಮಗಳನ್ನೇ ಅನ್ವಯಿಸುವುದು.

11. ಮುಖ್ಯ ಶಿಕ್ಷಕರು, ದೈಹಿಕ ಶಿಕ್ಷಕರು, ವಿಶೇಷ ಶಿಕ್ಷಕರ ವೃಂದದಲ್ಲಿ ಕನಿಷ್ಠ ದಾಖಲಾತಿ ನಿಯಮಗಳನ್ನು ಅನ್ವಯಿಸಿ ಕ್ರಮಗಳನ್ನು ಕೈಗೊಳ್ಳುವುದು. ಕನಿಷ್ಠ ಸಂಖ್ಯೆಯ ದಾಖಲಾತಿ ಇರುವ ಶಾಲೆಗಳ ಲಭ್ಯತೆಯಲ್ಲಿ

Scanned by CamScanner

ಕೊರತೆಯಿದ್ದಲ್ಲಿ ಇಳಿಕೆ ಕ್ರಮಾಂಕದಲ್ಲಿ ಗರಿಷ್ಟ ದಾಖಲಾತಿ ಇರುವ ಶಾಲೆಗಳಿಗೆ ಶಿಕ್ಷಕರ ಹಂಚಿಕೆ ಮಾನದಂಡವನ್ನು ಅನುಸರಿಸುವುದು.

12. ಹೆಚ್ಚುವರಿ ಕೌನ್ಸಿಲಿಂಗ್‌ಗೆ ಶಿಕ್ಷಕರ ಗೈರುಹಾಜರಾದ್ದಲ್ಲಿ ಡಮ್ಮಿ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿಗೊಳಿಸುವುದು.

**ಆ) ಪ್ರೌಢಶಾಲಾ ಶಿಕ್ಷಕರ ವೃಂದಕ್ಕೆ ಸಂಬಂಧಪಟ್ಟಂತೆ :**

ಕರ್ನಾಟಕ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ನಿಯಮ–2017 ರ ನಿಯಮ–4ರ ಪ್ರಕಾರ ವರ್ಗಾವಣೆಗೂ ಮುಂಚಿತವಾಗಿ ಹೆಚ್ಚುವರಿ ಶಿಕ್ಷಕರ ಮರು ನಿಯುಕ್ತಿ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ ಅದರಂತೆ 2017–18ನೇ ಸಾಲಿನಲ್ಲಿ ಟಿ.ಡಿ.ಎಸ್ ಮತ್ತು ಎಸ್.ಎ.ಟಿ.ಎಸ್ ನಲ್ಲಿ ಈಗಾಗಲೇ ಮಾಹಿತಿಯನ್ನು ಸಂಗ್ರಹಿಸಲಾದ ಮಾಹಿತಿಯನ್ನಧಾರಿಸಿ ಜಿಲ್ಲಾವಾರು ಹೆಚ್ಚುವರಿಯಾಗಿರುವ ಮತ್ತು ಅಗತ್ಯತೆಯಿರುವ ಶಿಕ್ಷಕರನ್ನು ಗುರ್ತಿಸಿರುವ ಮಾಹಿತಿಯನ್ನು ಈಗಾಗಲೇ ಇ–ಮೇಲ್ ಮೂಲಕ ತಮ್ಮ ಜಿಲ್ಲೆಗಳಿಗೆ ಹಾಗೂ ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಿ, ನ್ಯೂನತೆಗಳಿದ್ದಲ್ಲಿ ದಿನಾಂಕ.06.08.2018 ರೊಳಗೆ ಸರಿಪಡಿಸಿಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ 2017–18ನೇ ಸಾಲಿನ ಹೆಚ್ಚುವರಿ ಶಿಕ್ಷಕರ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಜಿಲ್ಲಾ ಉಪನಿರ್ದೇಶಕರು/ವಿಭಾಗೀಯ ಸಹ ನಿರ್ದೇಶಕರು ಆನ್‌ಲೈನ್ ಮೂಲಕ ವೇಳಾಪಟ್ಟಿ, ಹಾಗೂ ಕೆಳಕಂಡ ಮಾನದಂಡಗಳನ್ವಯ ನಡೆಸಲು ಸೂಚಿಸಿದೆ.

**ಹೆಚ್ಚುವರಿ ಶಿಕ್ಷಕರು ಮತ್ತು ಹುದ್ದೆ ಗುರುತಿಸುವ ಮಾನದಂಡಗಳು:–**

1) "ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮಗಳು–2017" ದಿನಾಂಕ.29.11.2017 ರಲ್ಲಿನ ನಿಯಮ 13 ರಲ್ಲಿ ಪ್ರಸ್ತಾಪಿಸಿರುವಂತೆ ಹೆಚ್ಚುವರಿ ಶಿಕ್ಷಕರನ್ನು ಗುರುತಿಸತಕ್ಕದ್ದು.
2) ಹೆಚ್ಚುವರಿ ಹುದ್ದೆಗಳನ್ನು ಗುರುತಿಸಲು ಮುಂದಿನ ಹಂತವಾರು ಕ್ರಮಗಳನ್ನು ಅನುಸರಿಸುವುದು.

**ಕೋಷ್ಟಕ**

| ಕ್ರ.ಸಂ | ವಿದ್ಯಾರ್ಥಿಗಳ ಸಂಖ್ಯೆ | ಪರಿಗಣಿಸಬೇಕಾದ ವಿಭಾಗ (Section) |
|---|---|---|
| 1 | 70 ಕ್ಕಿಂತ ಕಡಿಮೆ | 1 ವಿಭಾಗ |
| 2 | 71–140 | 2 ವಿಭಾಗ |
| 3 | 141–210 | 3 ವಿಭಾಗ |
| 4 | 211–280 | 4 ವಿಭಾಗ |
| 5 | 281–350 | 5 ವಿಭಾಗ |

3) ಒಂದೇ ಶಾಲೆಯಲ್ಲಿ 2 ಅಥವಾ ಹೆಚ್ಚು ಮಾಧ್ಯಮಗಳಿದ್ದಲ್ಲಿ, ವಿಭಾಗಗಳನ್ನು ಮಾಧ್ಯಮವಾರು ತರಗತಿಯ ಮಕ್ಕಳ ಸಂಖ್ಯೆ ಆಧರಿಸಿ ಗುರುತಿಸಬೇಕು.
4) ಆಂಗ್ಲ ಮತ್ತು ಕನ್ನಡ ಹಾಗೂ ಇನ್ನಿತರೆ ಮಾಧ್ಯಮಗಳು ನಡೆಯುತ್ತಿರುವ ಶಾಲೆಗಳಲ್ಲಿ ಪ್ರಥಮ/ದ್ವಿತೀಯ/ತೃತೀಯ ಭಾಷೆಗಳಿಗೆ ಶಿಕ್ಷಕರನ್ನು ಗಣನೆಗೆ ತೆಗೆದುಕೊಳ್ಳುವಾಗ ಎರಡೂ ವಿಭಾಗದ ಮಕ್ಕಳ ಸಂಖ್ಯೆಯನ್ನು ಒಂದೇ ವಿಭಾಗವೆಂದು ಪರಿಗಣಿಸಿ ಶಿಕ್ಷಕರಿಗೆ ಕಾರ್ಯಭಾರ ಹಂಚಿಕೆ ಮಾಡತಕ್ಕದ್ದು.

Scanned by CamScanner

5) 3 ರಿಂದ 5 ವಿಭಾಗವಿರುವ ಪ್ರೌಢಶಾಲೆಗಳಲ್ಲಿ ಸಿಬ್ಬಂದಿ ಸ್ತರ ವಿನ್ಯಾಸದ ಪ್ರಕಾರ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ 7 ಶಿಕ್ಷಕರಿರಬೇಕು. ಪ್ರಥಮ ಭಾಷೆ-1, ಹಿಂದಿ-1, ಆಂಗ್ಲಭಾಷೆ-1, ಕಲಾ-1, ವಿಜ್ಞಾನ(ಪಿಸಿಎಂ)-1, ವಿಜ್ಞಾನ(ಸಿಬಿಝಡ್)-1, ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1-1.

6) 5 ಕ್ಕಿಂತ ಹೆಚ್ಚು ವಿಭಾಗಗಳಿದ್ದಲ್ಲಿ ಮುಖ್ಯಶಿಕ್ಷಕರನ್ನು ಹೊರತುಪಡಿಸಿ ಪ್ರತಿ ವಿಭಾಗಕ್ಕೆ 1.5 ಶಿಕ್ಷಕರಂತೆ ಕಾರ್ಯಭಾರಕ್ಕೆ ಅನುಗುಣವಾಗಿ ಅಗತ್ಯ ಹುದ್ದೆಗಳನ್ನು ಕಲ್ಪಿಸಲು ಅವಕಾಶವಿರುತ್ತದೆ.

7) ಶಾಲೆಗಳಲ್ಲಿ ಸಿಬ್ಬಂದಿ ಸ್ತರ ವಿನ್ಯಾಸ [Staff Pattern] ಕ್ಕಿಂತ ಹೆಚ್ಚಾಗಿರುವ ಶಿಕ್ಷಕರ ಹುದ್ದೆಗಳನ್ನು ಹೆಚ್ಚುವರಿ ಶಿಕ್ಷಕ ಹುದ್ದೆಗಳೆಂದು ಗುರುತಿಸುವುದು.

8) ಹೆಚ್ಚುವರಿ ಹುದ್ದೆಯಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರುಗಳಲ್ಲಿ ಯಾರು ಆ ಶಾಲೆಯ ಸಂಬಂದಿಸಿದ ವಿಷಯದ ಹುದ್ದೆಯಲ್ಲಿ ಹೆಚ್ಚಿನ ಸೇವೆ ಸಲ್ಲಿಸಿರುತ್ತಾರೋ ಅವರನ್ನು ಹೆಚ್ಚುವರಿ ಎಂದು ಪರಿಗಣಿಸಬೇಕು.

9) ಮೇಲ್ಕಂಡ ಸಿಬ್ಬಂದಿ ಸ್ತರ ವಿನ್ಯಾಸದ ಶಿಕ್ಷಕರ ಜೊತೆಗೆ ಸಂಸ್ಕೃತ, ಉರ್ದು, ತೆಲುಗು, ತಮಿಳು, ಮರಾಠಿ, ಶಿಕ್ಷಕರನ್ನು ಹಾಗೂ ಭಾಷಾ ಅಲ್ಪಸಂಖ್ಯಾತ ಮಾಧ್ಯಮವಿರುವ ಶಾಲೆಗಳಲ್ಲಿ ಕನ್ನಡ ಭಾಷಾ ಶಿಕ್ಷಕರಿದ್ದಲ್ಲಿ ಅವರನ್ನು ಹೆಚ್ಚುವರಿ ಶಿಕ್ಷಕರು ಎಂದು ಗುರುತಿಸುವಂತಿಲ್ಲ.

10) ಕೆಲವು ಶಾಲೆಗಳಲ್ಲಿ ಆಂಗ್ಲ ಭಾಷಾ ಶಿಕ್ಷಕರ ಹುದ್ದೆಗಳು ಮಂಜೂರಾಗಿಲ್ಲ. ಇಂತಹ ಶಾಲೆಗಳಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 326 ಎಲ್.ಬಿ.ಪಿ 2010, ದಿ: 04.12.2010 ರ ಪ್ರಕಾರ ಒಂದಕ್ಕಿಂತ ಹೆಚ್ಚಿನ ಕಲಾ ಶಿಕ್ಷಕರಿದ್ದಲ್ಲಿ ಈ ಕಲಾ ಶಿಕ್ಷಕರ ಹುದ್ದೆಯನ್ನು ಮಾತ್ರ ಆಂಗ್ಲ ಭಾಷಾ ಶಿಕ್ಷಕರ ಹುದ್ದೆಯನ್ನಾಗಿ ಪರಿವರ್ತಿಸುವುದು ಹಾಗೂ ಸದರಿ ಹುದ್ದೆಯನ್ನು ಹೆಚ್ಚುವರಿ ಎಂದು ಗುರುತಿಸಬಾರದು. ಜಿಲ್ಲೆಯಲ್ಲಿ ಹೆಚ್ಚುವರಿ ಪ್ರಕ್ರಿಯೆ ನಂತರ ಅನಗತ್ಯವಿರುವ ಸಹ ಶಿಕ್ಷಕರ ಖಾಲಿ ಹುದ್ದೆಗಳನ್ನು ಮಾತ್ರ ಜಿಲ್ಲೆಯಲ್ಲಿ ಅಗತ್ಯವಿರುವ ಆಂಗ್ಲ ಭಾಷಾ ಹುದ್ದೆಗಳನ್ನಾಗಿ ಸರ್ಕಾರದ ಆದೇಶ ಸಂಖ್ಯೆ.ಇಡಿ ಎಲ್‌ಬಿಪಿ 2018 ದಿನಾಂಕ.18.01.2018 ರ ಷರತ್ತುಗಳಿಗೆ ಒಳಪಟ್ಟು ಪರಿವರ್ತಿಸಿಕೊಳ್ಳುವುದು.

11) ಗ್ರೇಡ್-2 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆ ಮಂಜೂರಾಗಿದ್ದಲ್ಲಿ ಈ ಶಿಕ್ಷಕರ ನಿವೃತ್ತಿ/ವರ್ಗಾವಣೆ ಇತರೆ ಮೂಲಗಳಿಂದ ಖಾಲಿಯಾದಲ್ಲಿ ಅಂತಹ ಹುದ್ದೆಗಳನ್ನು ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆ ಎಂದು ಪರಿಗಣಿಸತಕ್ಕದ್ದು. ಯಾವುದೇ ಕಾರಣಕ್ಕೂ ಇಂತಹ ಖಾಲಿ ಹುದ್ದೆಗೆ ಗ್ರೇಡ್-2 ದೈ.ಶಿ.ಶಿಕ್ಷಕರನ್ನು ಭರ್ತಿ ಮಾಡತಕ್ಕದ್ದಲ್ಲ. ಒಂದು ಶಾಲೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಮತ್ತು ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-2 ಎರಡೂ ಹುದ್ದೆಗಳಿದ್ದು, ಒಂದು ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆ/ಶಿಕ್ಷಕರು ಹೆಚ್ಚುವರಿಯಾಗಿದ್ದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಯನ್ನು/ಶಿಕ್ಷಕರನ್ನು ಹೆಚ್ಚುವರಿ ಎಂದು ಪರಿಗಣಿಸಬೇಕು.

12) ಡಾ॥ ವೈದ್ಯನಾಥನ್ ಸಮಿತಿಯನ್ವಯ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ತಾಲ್ಲೂಕುಗಳಲ್ಲಿ 500 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಮತ್ತು 12 ವಿಭಾಗಗಳಿರುವ ಸರ್ಕಾರಿ ಪ್ರೌಢಶಾಲೆಗಳಿಗೆ ಮಂಜೂರಾಗಿರುವ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಯನ್ನು ಹೆಚ್ಚುವರಿ ಶಿಕ್ಷಕರೆಂದು ಗುರುತಿಸುವಂತಿಲ್ಲ. ಇಂತಹ ಶಾಲೆಗಳಲ್ಲಿ ಇಬ್ಬರು ದೈಹಿಕ ಶಿಕ್ಷಣ ಶಿಕ್ಷಕರು ಸೇವೆಯಲ್ಲಿ ಮುಂದುವರೆಯಬೇಕು.

13) ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆ ಮಂಜೂರಾಗದೆ ಇರುವ ಶಾಲೆಗಳಿಗೆ ಜಿಲ್ಲೆಗಳಲ್ಲಿ ಅಗತ್ಯಕ್ಕಿಂತ ಹೆಚ್ಚುವರಿಯಾಗಿರುವ ಶಾಲೆಗಳಿಂದ ಗರಿಷ್ಠ ದಾಖಲಾತಿ ಇರುವ ಶಾಲೆಗಳಿಗೆ ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಯನ್ನು ಸ್ಥಳಾಂತರಿಸತಕ್ಕದ್ದು. ಹಾಗೆ ಸ್ಥಳಾಂತರಿಸುವಾಗ ದಾಖಲಾತಿಗಳ ಆಧಾರದಲ್ಲಿ ಇಳಿಕೆ ಕ್ರಮಾಂಕದಲ್ಲಿ ಶಾಲೆಗಳನ್ನು ಗುರುತಿಸುವುದು.

14) ಪ್ರೌಢಶಾಲೆಗಳಲ್ಲಿ ಒಂದಕ್ಕಿಂತ ಹೆಚ್ಚು ವಿಶೇಷ ಶಿಕ್ಷಕರುಗಳಿದ್ದಲ್ಲಿ (ವೃತ್ತಿ, ಚಿತ್ರಕಲೆ, ಸಂಗೀತ, ನೃತ್ಯ, ನಾಟಕ) ಕಾರ್ಯಭಾರಕ್ಕನುಗುಣವಾಗಿ ಅಗತ್ಯವಿರುವ ಶಿಕ್ಷಕರನ್ನು ಉಳಿಸಿಕೊಂಡು, ಉಳಿದ ಶಿಕ್ಷಕರನ್ನು ಹೆಚ್ಚುವರಿ ಶಿಕ್ಷಕರೆಂದು ಗುರುತಿಸಿ ಅಗತ್ಯವಿರುವ ಶಾಲೆಗಳಿಗೆ ಸ್ಥಳಾಂತರಿಸುವುದು. ಹಾಗೂ 12 ವಿಭಾಗ ಹಾಗೂ

Scanned by CamScanner

500ಕ್ಕೂ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳಲ್ಲಿ ಎರಡು ವಿಶೇಷ ಶಿಕ್ಷಕರ ಹುದ್ದೆಗಳನ್ನು ಉಳಿಸಿಕೊಳ್ಳುವುದು. ಶಾಲಾ ಆವರಣದಲ್ಲಿ ಕೈತೋಟ ಇರುವ ಅಥವಾ ಕೈತೋಟ ನಿರ್ಮಿಸಲು ಸಾಕಷ್ಟು ಸ್ಥಳಾವಕಾಶ ಇರುವ ಶಾಲೆಗಳಲ್ಲಿ ತೋಟಗಾರಿಕೆ ಶಿಕ್ಷಕರನ್ನು ಹಾಗೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಶಾಲೆಗಳಲ್ಲಿ ಹೊಲಿಗೆ ಶಿಕ್ಷಕರನ್ನು ಆದ್ಯತೆ ಮೇರೆಗೆ ಮರುಹೊಂದಾಣಿಕೆ ಮಾಡತಕ್ಕದ್ದು. ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಕನಿಷ್ಟ ಒಂದು ವಿಶೇಷ ಶಿಕ್ಷಕರ ಹುದ್ದೆ ಇರುವಂತೆ ಕ್ರಮವಹಿಸುವುದು. ಸರ್ಕಾರಿ ಪ್ರೌಢ ಶಾಲೆಗಳಲ್ಲಿರುವ ಸಂಗೀತ ಶಿಕ್ಷಕರ ಹುದ್ದೆಗಳನ್ನು ಸಂಗೀತ ಕಲಿಯುತ್ತಿರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೆಚ್ಚುವರಿಯೆಂದು ಪರಿಗಣಿಸದೇ ಆಯಾ ಶಾಲೆಗಳಲ್ಲಿಯೇ ಮುಂದುವರೆಸುವುದು.

15) ಹೆಚ್ಚುವರಿ ಕೌನ್ಸಿಲಿಂಗ್‌ಗೆ ಶಿಕ್ಷಕರ ಗೈರುಹಾಜರಾದ್ದಲ್ಲಿ ಡಮ್ಮಿ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿಗೊಳಿಸುವುದು.

16) ಜಿಲ್ಲೆಯಲ್ಲಿ ಹೆಚ್ಚುವರಿ ಪ್ರಕ್ರಿಯೆ ನಂತರ ವಿಷಯ ಹೊಂದಾಣಿಕೆಯಾಗದೆ ಉಳಿಯುವ ಹೆಚ್ಚುವರಿ ಶಿಕ್ಷಕರನ್ನು ಆಯಾ ವಿಭಾಗದೊಳಗಿನ ಅಗತ್ಯ ಖಾಲಿ ಹುದ್ದೆಗಳಿಗೆ ಕೌನ್ಸಿಲಿಂಗ್ ನಡೆಸಲು ಸಂಬಂಧಿಸಿದ ವಿಭಾಗೀಯ ಸಹ ನಿರ್ದೇಶಕರಿಗೆ ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡತಕ್ಕದ್ದು. ಸದರಿ ಮಾಹಿತಿಯನ್ನು ಆಧರಿಸಿ ಆಯಾ ವಿಭಾಗೀಯ ಸಹ ನಿರ್ದೇಶಕರು ನಿಗಧಿಪಡಿಸಿದ ವೇಳಾಪಟ್ಟಿ ದಿನಾಂಕದಂದು ಆನ್‌ಲೈನ್‌ನಲ್ಲಿ ಕೌನ್ಸಿಲಿಂಗ್ ಮೂಲಕ ಹೆಚ್ಚುವರಿ ಶಿಕ್ಷಕರನ್ನು ಸ್ಥಳಾಂತರಿಸತಕ್ಕದ್ದು.

**ಇ) ಪ್ರಾಥಮಿಕ ಹಾಗು ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಗುರುತಿಸುವ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳು :**

1) ಶಾಲೆಗಳಲ್ಲಿ ಹೆಚ್ಚುವರಿ ಎಂದು ಗುರುತಿಸಲಾದ ವಿವಿಧ ಶಿಕ್ಷಕರ ಒಟ್ಟು ಸಂಖ್ಯೆಯು ಆಯಾ ಶಾಲೆಯ ಒಟ್ಟು ಹೆಚ್ಚುವರಿ ಸಂಖ್ಯೆಯ ಮಿತಿಯೊಳಗೆ ಇರತಕ್ಕದ್ದು. ಕೆಲವೊಂದು ಸಂದರ್ಭಗಳಲ್ಲಿ ವಿಷಯವಾರು ಪರಿಗಣಿಸಿದಂತೆ ಹೆಚ್ಚುವರಿ ಶಿಕ್ಷಕರ ಸಂಖ್ಯೆಯು ಒಟ್ಟಾರೆ ಗುರುತಿಸಬಹುದಾದ ಹೆಚ್ಚುವರಿ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಬರಬಹುದಾದರೂ ಶಾಲೆಗೆ ಅಗತ್ಯವಿರುವ ಶಿಕ್ಷಕರ ಸಂಖ್ಯೆಯನ್ನು ಪರಿಗಣಿಸಿ ಮಿತಿಗೊಳಿಸತಕ್ಕದ್ದು.

2) ಹೆಚ್ಚುವರಿ ಶಿಕ್ಷಕರನ್ನು ಆಯಾ ಶಾಲೆಯಲ್ಲಿ ಗುರುತಿಸುವ ಸಮಯದಲ್ಲಿ ಈ ಕೆಳಕಂಡ ಶಿಕ್ಷಕರಿಗೆ ವರ್ಗಾವಣೆ ನಿಯಮಗಳಲ್ಲಿನ ಪ್ರಸ್ತಾಪಗಳನ್ವಯ ವಿನಾಯಿತಿ ನೀಡಲಾಗಿದೆ.

- ವರ್ಗಾವಣಾ ಕಾಯ್ದೆ ನಿಯಮ 3ಎ ರಂತೆ ಕಡ್ಡಾಯ ವರ್ಗಾವಣೆಗೆ ನೀಡಿರುವ ವಿನಾಯಿತಿ ಪ್ರಕರಣಗಳಂತೆ ಹೆಚ್ಚುವರಿ ಶಿಕ್ಷಕರ ಪ್ರಕ್ರಿಯೆಯಲ್ಲಿಯೂ ವಿನಾಯಿತಿ ನೀಡಿ ಮುಂದಿನ ಜೇಷ್ಠತೆ ಇರುವ ಶಿಕ್ಷಕರನ್ನು ಸ್ಥಳನಿಯುಕ್ತಿಗೆ ಒಳಪಡಿಸತಕ್ಕದ್ದು.
- ಹೆಚ್ಚುವರಿಯಾಗಿರುವ ವಿಷಯದಲ್ಲಿ ಪೂರ್ಣವಾಗಿ ಮೇಲ್ಕಂಡಂತೆ ವಿನಾಯಿತಿ ಶಿಕ್ಷಕರೇ ಇದ್ದಾಗ, ವಿನಾಯಿತಿ ಅನ್ವಯಿಸುವುದಿಲ್ಲ. ಇವರಲ್ಲಿ ಹಿರಿಯ ಶಿಕ್ಷಕರನ್ನು ಹೆಚ್ಚುವರಿಯೆಂದು ಗುರುತಿಸಿ ಸ್ಥಳಾಂತರಿಸುವುದು.
- ಹೆಚ್ಚುವರಿ ಶಿಕ್ಷಕರ ಸ್ಥಳ ನಿಯುಕ್ತಿ ಕ್ರಮಗಳನ್ನು ಕೈಗೊಳ್ಳುವಾಗ ವರ್ಗಾವಣಾ ನಿಯಮಗಳಲ್ಲಿನ ಕಡ್ಡಾಯ ವರ್ಗಾವಣೆಗಳಿಗೆ ವಿಧಿಸಿರುವ ನೀತಿ–ನಿಯಮಗಳನ್ನೇ ಅನುಸರಿಸತಕ್ಕದ್ದು.

**ಈ) ಮೇಲಿನಂತೆ ಇರುವ ನೀತಿಗನುಸಾರವಾಗಿ, ಹೆಚ್ಚುವರಿ ಸೇರಿದಂತೆ ಕಡ್ಡಾಯ ವರ್ಗಾವಣೆ ಮತ್ತು ಐಚ್ಛಿಕ ವರ್ಗಾವಣೆಗಳನ್ನೊಳಗೊಂಡಂತೆ ಇಡೀ ವರ್ಗಾವಣಾ ಪ್ರಕ್ರಿಯೆಗಳಿಗಾಗಿ ಕ್ಷೇತ್ರಶಿಕ್ಷಣಾಧಿಕಾರಿಯವರು ಪೂರ್ವಭಾವಿಯಾಗಿ ಕೆಳಗಿನಂತೆ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳತಕ್ಕದ್ದು. ಅಂದರೆ,**

Scanned by CamScanner

1) ಈಗಾಗಲೇ, ರಾಜ್ಯದ ಎಲ್ಲಾ ಪ್ರಾಥಮಿಕ / ಪ್ರೌಢಶಾಲೆಗಳಲ್ಲಿನ ಸ್ಯಾಟ್ಸ್ (SATS) ನಲ್ಲಿರುವ ದಾಖಲಾತಿ ಆಧಾರದ ಮೇಲೆ ಕಿರಿಯ ಪ್ರಾಥಮಿಕ ಘಟಕ ಹಾಗು ಹಿರಿಯ ಪ್ರಾಥಮಿಕ ಘಟಕಕ್ಕೆ ಪ್ರತ್ಯೇಕವಾಗಿ ಅಗತ್ಯವಿರುವ ಹುದ್ದೆಗಳನ್ನು ಮಂಜೂರಾದ ಹುದ್ದೆಗಳು ಎಂಬುದಾಗಿ ಮತ್ತು ಆ ಶಾಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆಯನ್ನು ವೆಬ್-ಸೈಟ್ ನಲ್ಲಿ ಪ್ರಕಟಿಸಲಾಗಿದೆ. ಅದರಂತೆ ವರ್ಗಾವಣೆ ಪ್ರಕ್ರಿಯೆಯಲ್ಲಿ ಕ್ರಮ ವಹಿಸತಕ್ಕದ್ದು.

2) ಅದರ ಆಧಾರದಲ್ಲಿ ಆ ಶಾಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆಯನ್ನು ಮತ್ತು ಆಯಾ ಶಿಕ್ಷಕರ ವಿವರಗಳನ್ನು ಹಾಗು ಹೆಚ್ಚುವರಿಗೊಳಿಸಬಹುದಾದ ಶಿಕ್ಷಕರ ವಿವರಗಳನ್ನು ವರ್ಗಾವಣಾ ತಂತ್ರಾಂಶದಲ್ಲಿ ನೂತನವಾಗಿ ಅಳವಡಿಸಿರುವ ಪ್ಲಾಟ್-ಫಾರಂನಲ್ಲಿ ಲಭ್ಯಪಡಿಸಿದೆ. ಸದರಿ ವಿವರಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಯವರು ಪರಿಶೀಲಿಸಿ ಎಲೆಕ್ಟ್ರಾನಿಕ್ ಮಾದರಿಯಲ್ಲಿ (ಇ-ಮೋಡ್ ಸರ್ಟಿಫಿಕೇಷನ್) ದೃಢೀಕರಿಸತಕ್ಕದ್ದು. ದೃಢೀಕರಣಗಳನ್ನು ಇ-ಸೈನ್ ಮಾದರಿಯಲ್ಲಿಯೂ ಪಡೆಯಲು ಉದ್ದೇಶಿಸಿದ್ದು ಈ ಕುರಿತಂತೆ ಇಲಾಖೆಯಿಂದ ಹೊರಡಿಸಬಹುದಾದ ಸೂಚನೆಗಳನ್ನು ಗಮನಿಸಿ ಅಂತೆಯೇ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

3) ಎಲ್ಲಾ ವಿವರಗಳು ಸ್ಯಾಟ್ಸ್ (SATS) ಆಧಾರಿತ ಮತ್ತು ಟಿಡಿಎಸ್ ಆಧಾರಿತ ಎಂಬುದನ್ನು ಗಮನಿಸತಕ್ಕದ್ದು ಮತ್ತು ಸದರಿ ಎರಡೂ ಡಾಟಾ ಬೇಸ್‌ಗಳಿಗೆ ಕ್ಷೇತ್ರಶಿಕ್ಷಣಾಧಿಕಾರಿಯವರುಗಳೇ ಜವಾಬ್ದಾರರು ಎಂಬುದನ್ನು ಗಮನಿಸತಕ್ಕದ್ದು.

4) ಮೇಲಿನಂತೆ ಎಲೆಕ್ಟ್ರಾನಿಕ್ ಮಾದರಿಯಲ್ಲಿ (ಇ-ಮೋಡ್ ಸರ್ಟಿಫಿಕೇಷನ್) ದಿನಾಂಕ 06/08/2018ರೊಳಗೆ ದೃಢೀಕರಿಸುವ ಮುನ್ನ ಟಿಡಿಎಸ್ ನಲ್ಲಿ ಶಾಲೆಗೆ ಕೌನ್ಸಿಲಿಂಗ್ ಮುಖಾಂತರವಾಗಿ ಇತ್ತೀಚೆಗೆ ಹಾಜರಾಗಿರುವ ಸಿಆರ್‌ಪಿ/ಬಿಆರ್‌ಪಿ/ಇಸಿಓಗಳ ವಿವರಗಳನ್ನು ಇಂದೀಕರಿಸಿರುವ ಬಗ್ಗೆ ಖಾತ್ರಿಮಾಡಿಕೊಳ್ಳತಕ್ಕದ್ದು. ಈಗಾಗಲೇ ಸಿಆರ್‌ಪಿ/ಬಿಆರ್‌ಪಿ/ಇಸಿಓಗಳ ಸ್ಥಳ ನಿಯುಕ್ತಿ ಕ್ರಮಗಳನ್ನು ಪ್ರಕಟಿತ ವೇಳಾ ಪಟ್ಟಿಯಂತೆ ಪೂರ್ಣಗೊಳಿಸಿರತಕ್ಕದ್ದು. ಕಡ್ಡಾಯವಾಗಿ ದಿನಾಂಕ 06/08/2018ರೊಳಗೆ ಮೇಲಿನ ಅಂಶಗಳ ಇಂದೀಕರಣವಾಗತಕ್ಕದ್ದು. ಈ ಬಗ್ಗೆ ಸಂಬಂಧಿಸಿದ ಡಿಡಿಓಗಳು / ಮುಖ್ಯಶಿಕ್ಷಕರುಗಳು, ಬಿಇಓಗಳು ಹಾಗು ಡಿಡಿಪಿಐರವರು **ಅನುಬಂಧ-1**ರಂತೆ ದೃಢೀಕರಿಸಿ ಸ್ಕ್ಯಾನ್ಡ್ ಪ್ರತಿಯನ್ನು ತಂತ್ರಾಂಶದಲ್ಲಿ ಒದಗಿಸಿರುವ ಸ್ಥಳದಲ್ಲಿ ಅಪ್-ಲೋಡ್ ಮಾಡತಕ್ಕದ್ದು.

5) ದಿನಾಂಕ 09/08/2018ರಂದು ಕ್ಷೇತ್ರಶಿಕ್ಷಣಾಧಿಕಾರಿಯವರು ಶಾಲಾವಾರು ವಿಷಯವಾರು ಖಾಲಿ ಹುದ್ದೆಗಳ ವಿವರಗಳನ್ನು ವರ್ಗಾವಣಾ ತಂತ್ರಾಂಶದಲ್ಲಿ ಪ್ರಕಟಿಸಲು ದಿನಾಂಕ ನಿಗದಿಗೊಳಿಸಲಾಗಿದೆ. ಈ ರೀತಿ **ಆ ದಿನಾಂಕದಲ್ಲಿ ಪ್ರಕಟಿಸುವ ಖಾಲಿ ಹುದ್ದೆಗಳ ಪಟ್ಟಿಯಲ್ಲಿ ನಂತರದ ದಿನಾಂಕದಲ್ಲಿ ಯಾವುದೇ ಸೇರ್ಪಡೆ ಮತ್ತು ಕಡಿತಕ್ಕೆ ಅವಕಾಶವಿಲ್ಲ ಎಂಬುದಾಗಿ ಕಟ್ಟುನಿಟ್ಟಾಗಿ ಸೂಚಿಸಿದೆ. ಯಾವುದೇ ವ್ಯತ್ಯಾಸವಾದಲ್ಲಿ ಸದರಿ ಕ್ಷೇತ್ರಶಿಕ್ಷಣಾಧಿಕಾರಿಯವರು ನೇರ ಜವಾಬ್ದಾರರಾಗುತ್ತಾರೆ ಮತ್ತು ಸದರಿಯವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತಿನಲ್ಲಿರಿಸಿ ವಿಚಾರಣಾ ಕ್ರಮಗಳನ್ನು ಜಾರಿಗೊಳಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತದೆ.**

6) ವರ್ಗಾವಣೆ ಪೂರ್ವದಲ್ಲಿ ಎಲ್ಲ ಖಾಲಿ ಹುದ್ದೆಗಳನ್ನು ಸಮರ್ಪಕವಾಗಿ ಗುರುತಿಸಿ ಪ್ರಕಟಿಸತಕ್ಕದ್ದು. ವರ್ಗಾವಣೆ ಪ್ರಕ್ರಿಯೆ ಪೂರ್ವದಲ್ಲಿ ಖಾಲಿ ಹುದ್ದೆಗಳನ್ನು ಪ್ರಕಟಿಸದೇ ವರ್ಗಾವಣೆ ಸಮಯದಲ್ಲಿ ಸ್ಥಳವನ್ನು ಸೇರ್ಪಡೆ ಮಾಡಿ ವರ್ಗಾವಣೆ ಪ್ರಕ್ರಿಯೆಯಲ್ಲಿ ಗೊಂದಲ ಉಂಟು ಮಾಡಿ ಇಲಾಖೆಯನ್ನು ಮುಜುಗರಕ್ಕೆ ಸಿಲುಕಿಸಿರುವುದನ್ನು ಈ ಹಿಂದಿನ ಸಾಲುಗಳಲ್ಲಿ ಗಮನಿಸಲಾಗಿದ್ದು ಇದನ್ನು ಅತ್ಯಂತ ಗಂಭಿರವಾಗಿ ಪರಿಗಣಿಸಿದೆ. ಅಂತಹ ಪ್ರಸಂಗಗಳಿಗೆ ಕಾರಣರಾದವರ ವಿರುದ್ಧ ವಿಚಾರಣಾ ಕ್ರಮಗಳನ್ನು ಜಾರಿಗೊಳಿಸಲಾಗುವುದು. ಎಲ್ಲ ಖಾಲಿ ಹುದ್ದೆಗಳನ್ನು ಪ್ರಕಟಿಸಲಾಗಿದೆ ಎಂಬ ಬಗ್ಗೆ **ಅನುಬಂಧ-2**ರಲ್ಲಿ ಬಿಇಓ ಮತ್ತು ಉಪನಿರ್ದೇಶಕರು ದೃಢೀಕರಣವನ್ನು ನೀಡತಕ್ಕದ್ದು. ಸದರಿ ದೃಢೀಕರಣದ ಸ್ಕ್ಯಾನ್ಡ್ ಪ್ರತಿಯನ್ನು ತಂತ್ರಾಂಶದಲ್ಲಿ ಒದಗಿಸಿರುವ ಸ್ಥಳದಲ್ಲಿ ಅಪ್-ಲೋಡ್ ಮಾಡತಕ್ಕದ್ದು.

7) ರಾಜ್ಯದ 7062 ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು 10,686 ಹೆಚ್ಚುವರಿ ಶಿಕ್ಷಕರನ್ನು ಹಾಗೂ 4680 ಪ್ರೌಢಶಾಲೆಗಳಲ್ಲಿ ಒಟ್ಟು 1,941 ಹೆಚ್ಚುವರಿ ಶಿಕ್ಷಕರನ್ನು, ಟಿಡಿಎಸ್ ತಂತ್ರಾಂಶದಲ್ಲಿನ ಶಿಕ್ಷಕರ ವಿವರಗಳ ಆಧಾರದಲ್ಲಿ ಗುರುತಿಸಲಾಗಿದೆ. ಇದನ್ನು ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ

Scanned by CamScanner

ಹಂತದಲ್ಲಿ ಮತ್ತೊಮ್ಮೆ ಪರಿಶೀಲಿಸಿ ಇತ್ತೀಚೆಗೆ ಆಗಿರುವ ಬದಲಾವಣೆಗಳಂತೆ ಪರಿಷ್ಕರಿಸಲು ಸೂಚಿಸಿದೆ. ಸದರಿ ಎಲ್ಲಾ ಹೆಚ್ಚುವರಿ ಶಿಕ್ಷಕರನ್ನು ಅಗತ್ಯ ಸ್ಥಳಗಳಲ್ಲಿ ನೀತಿಯಂತೆ ಆನ್-ಲೈನ್ ಕೌನ್ಸಿಲಿಂಗ್ ಮುಖಾಂತರ ಸ್ಥಳನಿಯುಕ್ತಿಗೊಳಿಸತಕ್ಕದ್ದು. ಮ್ಯಾನುವಲ್ ಕೌನ್ಸಿಲಿಂಗ್ ಅನ್ನು ಕಡ್ಡಾಯವಾಗಿ ನಿಷೇಧಿಸಿದೆ. ಕೌನ್ಸಿಲಿಂಗ್ ನಂತರದಲ್ಲಿ ಆಯಾ ಶಿಕ್ಷಕರು ಸ್ಥಳನಿಯುಕ್ತಿಗೊಂಡ ಶಾಲೆಗಳಲ್ಲಿ ತ್ವರಿತವಾಗಿ ಹಾಜರಾಗತಕ್ಕದ್ದು ಮತ್ತು 01/09/2018ರ ನಂತರದಲ್ಲಿ ಮೂಲ ಶಾಲೆಯಲ್ಲಿ ಸದರಿ ಹೆಚ್ಚುವರಿ ಶಿಕ್ಷಕರುಗಳ ವೇತನವನ್ನು ಸೆಳೆಯತಕ್ಕದ್ದಲ್ಲ. ಈ ಬಗ್ಗೆ ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಯವರು ಅಗತ್ಯ ಕ್ರಮಗಳನ್ನು ವಹಿಸತಕ್ಕದ್ದು ಮತ್ತು ಕಟ್-ಆಫ್ ದಿನಾಂಕದ ನಂತರದಲ್ಲಿ ವೇತನ ಸೆಳೆದಲ್ಲಿ ಸದರಿ ಕ್ಷೇತ್ರಶಿಕ್ಷಣಾಧಿಕಾರಿಯವರ ವಿರುದ್ಧ ವಿಚಾರಣಾ ಕ್ರಮಗಳನ್ನು ಜಾರಿಗೊಳಿಸಲಾಗುವುದು. ಸ್ಥಳೀಯ ಸಂಸ್ಥೆಗಳ ಚುನಾವಣಾ ಪ್ರಕ್ರಿಯೆಗಳು ಚಾಲ್ತಿಯಲ್ಲಿದ್ದು, ಚುನಾವಣಾ ಪ್ರಕ್ರಿಯೆಗಳಲ್ಲಿ ತೊಡಗಿರುವ ಶಿಕ್ಷಕರ ಪ್ರಕರಣಗಳಲ್ಲಿ ಚುನಾವಣೆಗಳು ಮುಗಿದ ನಂತರ ಬಿಡುಗಡೆಗೊಳಿಸತಕ್ಕದ್ದು.

**8)** ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಈಗಾಗಲೇ ನೇಮಕಾತಿಗೆ ಅಧಿಸೂಚಿಸಿರುವ ಹುದ್ದೆಗಳನ್ನು ವರ್ಗಾವಣೆಗೆ ನೀಡತಕ್ಕದ್ದಲ್ಲ.

**9)** ಇಡೀ ಪ್ರಕ್ರಿಯೆಯು ಆನ್-ಲೈನ್ ವ್ಯವಸ್ಥೆಯಲ್ಲಿ ಕೇಂದ್ರೀಕೃತ ಮಾದರಿಯಲ್ಲಿ ನಿರ್ವಹಣೆಯಾಗಲಿದ್ದು ಈ ಬಗ್ಗೆ ಟಿಡಿಎಸ್ ತಂತ್ರಾಂಶದಲ್ಲಿನ ಶಾಲಾವಾರು ಝೋನ್‌ಗಳ (Zone) ಸಹಿತವಾಗಿ ಎಲ್ಲಾ ವಿವರಗಳ ಇಂದೀಕರಣ ಮತ್ತು ವರ್ಗಾವಣಾ ತಂತ್ರಾಂಶದಲ್ಲಿ ಅಗತ್ಯ ಖಾಲಿ ಹುದ್ದೆಗಳ ವಿವರಗಳನ್ನು ಅಳವಡಿಸುವ ಕಾರ್ಯ ಕ್ಷೇತ್ರಶಿಕ್ಷಣಾಧಿಕಾರಿಯವರ ಆದ್ಯ ಕರ್ತವ್ಯವಾಗಿರುತ್ತದೆ.

**ಉ) ವರ್ಗಾವಣೆಗಳ ನಿರ್ವಹಣೆಗೆ ವೇಳಾ ಪಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಾಲೆ) :**

**ವರ್ಗಾವಣಾ ನಿಯಮ – 2017ರ ನಿಯಮ 6ರಂತೆ ಈ ಕೆಳಗಿನ ಅನುಕ್ರಮದಲ್ಲಿ ವರ್ಗಾವಣೆಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ.**

| ನಿಯಮ | ವಿವರ |
|---|---|
| ನಿಯಮ 6(3)(i) | ಹೆಚ್ಚುವರಿ ಶಿಕ್ಷಕರ ಸ್ಥಳನಿಯುಕ್ತಿ (ದ್ವೈ-ವಾರ್ಷಿಕ ವರ್ಷವಾಗಿರುವುದರಿಂದ ಕೆಳಗಿನ ವೇಳಾಪಟ್ಟಿಯಂತೆ) |
| ನಿಯಮ 6(3)( ii ) | ನಿಯಮ 21(3)ರನ್ವಯದ ಕಡ್ಡಾಯ ವರ್ಗಾವಣೆಗಳು (ಈಗಾಗಲೇ ಮುಗಿದಿದೆ) |
| ನಿಯಮ 6(3)(iii) | ಐಚ್ಛಿಕ ವರ್ಗಾವಣೆಗಳು (ಕೆಳಗಿನ ವೇಳಾಪಟ್ಟಿಯಂತೆ) |
| ನಿಯಮ 6(3)(iv) | ನಿಯಮ 21(4)ರನ್ವಯದ ಕಡ್ಡಾಯ ವರ್ಗಾವಣೆಗಳು (ಈಗಾಗಲೇ ಮುಗಿದಿದೆ) |
| ನಿಯಮ 6(3)(v) | ಕಡ್ಡಾಯ ವರ್ಗಾವಣೆಗಳು ವರ್ಗಾವಣೆ ಕಾಯ್ದೆಯ ಸೆಕ್ಷನ್ 3ಎ(1)(2) (ಕೆಳಗಿನ ವೇಳಾಪಟ್ಟಿಯಂತೆ) |
| ನಿಯಮ 6(3)(vi) | ಶಿಸ್ತು ಪ್ರಕರಣಗಳಲ್ಲಿ ವರ್ಗಾವಣೆಗಳು (ಕೆಳಗಿನ ವೇಳಾಪಟ್ಟಿಯಂತೆ) |
| ನಿಯಮ 6(3)(vii) | ಪರಸ್ಪರ ವರ್ಗಾವಣೆಗಳು (ಘಟಕದ ಒಳಗೆ) (ಕೆಳಗಿನ ವೇಳಾಪಟ್ಟಿಯಂತೆ) |
| ನಿಯಮ 6(3)(viii) | ಘಟಕದ ಹೊರಗಿನ ಐಚ್ಛಿಕ ವರ್ಗಾವಣೆಗಳು (ಕೆಳಗಿನ ವೇಳಾಪಟ್ಟಿಯಂತೆ) |
| ನಿಯಮ 6(3)(ix) | ಪರಸ್ಪರ ವರ್ಗಾವಣೆಗಳು (ಘಟಕದ ಹೊರಗಿನ) (ಕೆಳಗಿನ ವೇಳಾಪಟ್ಟಿಯಂತೆ) |

**ಊ) 2018-19 ನೇ ಸಾಲಿನ ಹೆಚ್ಚುವರಿ ಶಿಕ್ಷಕರ ಮರು ನಿಯುಕ್ತಿ ಕ್ರಮಗಳ ವೇಳಾಪಟ್ಟಿ :**

| ಕ್ರಮ ಸಂಖ್ಯೆ | ವಿವರ | ದಿನಾಂಕಗಳು | ಕ್ರಮವಹಿಸುವ ಅಧಿಕಾರಿಗಳು |
|---|---|---|---|
| 1 | ಟಿಡಿಎಸ್ ನಲ್ಲಿ ಹಾಗು ವರ್ಗಾವಣಾ ತಂತ್ರಾಂಶದಲ್ಲಿ ಶಾಲೆಗಳ ವಲಯದ ವಿವರಗಳನ್ನು ಇಂದೀಕರಿಸುವುದು | 04/08/2018ರೊಳಗೆ | 1.ಉಪನಿರ್ದೇಶಕರು(ಆಡಳಿತ)<br>2.ಕ್ಷೇತ್ರಶಿಕ್ಷಣಾಧಿಕಾರಿಗಳು |
| 2 | ಟಿಡಿಎಸ್ ನಲ್ಲಿ ಶಿಕ್ಷಕರ ಎಲ್ಲ ವಿವರಗಳನ್ನು ಇಂದೀಕರಿಸುವುದು ಮತ್ತು ಅಗತ್ಯ ದೃಢೀಕರಣಗಳನ್ನು | 08/08/2018ರೊಳಗೆ | 1.ಉಪನಿರ್ದೇಶಕರು(ಆಡಳಿತ)<br>2.ಕ್ಷೇತ್ರಶಿಕ್ಷಣಾಧಿಕಾರಿಗಳು |

Scanned by CamScanner

| | | | |
|---|---|---|---|
| | ಮಾದರಿಯಂತೆ ಸಲ್ಲಿಸುವುದು. ದೃಢೀಕರಣಗಳನ್ನು ಇ-ಸೈನ್ ಮಾದರಿಯಲ್ಲಿಯೂ ಪಡೆಯಲು ಉದ್ದೇಶಿಸಿದ್ದು ಈ ಕುರಿತಂತೆ ಇಲಾಖೆಯಿಂದ ಹೊರಡಿಸಬಹುದಾದ ಸೂಚನೆಗಳನ್ನು ಗಮನಿಸಿ ಅಂತೆಯೇ ಕ್ರಮಗಳನ್ನು ಕೈಗೊಳ್ಳತಕ್ಕದ್ದು. | | 3. ಡಿಡಿಪಿಐ ಗಳು |
| 3 | ಶಾಲಾವಾರು ಖಾಲಿ ಹುದ್ದೆಗಳ ಪಟ್ಟಿ ಪ್ರಕಟ ಮತ್ತು ಫ್ರೀಜ್ ಮಾಡುವುದು | 09/08/2018 | 1.ಉಪನಿರ್ದೇಶಕರು(ಆಡಳಿತ)<br>2.ಕ್ಷೇತ್ರಶಿಕ್ಷಣಾಧಿಕಾರಿಗಳು |
| 4 | ಶಾಲಾವಾರು ಹುದ್ದೆಗಳ ಮತ್ತು ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳ (ವಿಷಯವಾರು) ಸಂಖ್ಯೆ ಹಾಗೂ ಹೆಚ್ಚುವರಿಯಾಗುವ ಶಿಕ್ಷಕರ ಸ್ಥಳ ಮತ್ತು ವಿಷಯವಾರು ಶಿಕ್ಷಕರ ಹೆಸರುಗಳ ತಾತ್ಕಾಲಿಕ ಪಟ್ಟಿಯನ್ನು ಆನ್-ಲೈನ್ ನಲ್ಲಿ ಮತ್ತು ಎಲ್ಲಾ ತಾಲ್ಲೂಕುಗಳ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸುವುದು. | 09/08/2018 | 1.ಉಪನಿರ್ದೇಶಕರು(ಆಡಳಿತ)<br>2.ಕ್ಷೇತ್ರಶಿಕ್ಷಣಾಧಿಕಾರಿಗಳು |
| 5 | ಹೆಚ್ಚುವರಿ ಶಿಕ್ಷಕರ ತಾತ್ಕಾಲಿಕ ಪಟ್ಟಿಗೆ ಶಿಕ್ಷಕರುಗಳು ಸೂಕ್ತ ದಾಖಲೆಗಳೊಂದಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ನಿಗಧಿಪಡಿಸಿದ ಅವಧಿ | 10/08/2018<br>ರಿಂದ<br>14/08/2018 | ಸಂಬಂಧಪಟ್ಟ ಶಿಕ್ಷಕರು |
| 6 | ಶಿಕ್ಷಕರು ಸಲ್ಲಿಸಿರುವ ಆಕ್ಷೇಪಣೆಗಳನ್ನು ಶಿಕ್ಷಕರ ಸೇವಾ ದಾಖಲೆಗಳೊಂದಿಗೆ ಪರಿಶೀಲಿಸಿ, ಆಕ್ಷೇಪಣೆಯನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವುದು (ಆನ್-ಲೈನ್ ನಲ್ಲಿ) | 11/08/2018<br>ರಿಂದ<br>16/08/2018 | ಕ್ಷೇತ್ರಶಿಕ್ಷಣಾಧಿಕಾರಿಗಳು |
| 7 | ಕ್ಷೇತ್ರಶಿಕ್ಷಣಾಧಿಕಾರಿಗಳು ಸಲ್ಲಿಸಿರುವ ಪಟ್ಟಿಯನ್ನು ಪರಿಶೀಲಿಸಿ ಜಿಲ್ಲಾ ಹಂತದಲ್ಲಿ ಹೆಚ್ಚುವರಿ ಶಿಕ್ಷಕರ ಅಂತಿಮ ಆದ್ಯತಾ ಪಟ್ಟಿಯ ಪ್ರಕಟಣೆ ಆನ್-ಲೈನ್ ನಲ್ಲಿ | 17/08/2018 | ಉಪನಿರ್ದೇಶಕರು(ಆಡಳಿತ) |
| 8 | ಪ್ರಾಥಮಿಕ ಹಾಗು ಪ್ರೌಢಶಾಲಾ ಶಿಕ್ಷಕರ ಹೆಚ್ಚುವರಿ ಶಿಕ್ಷಕರ ಕೌನ್ಸಿಲಿಂಗ್ ಪ್ರಕ್ರಿಯೆ<br>○ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಂಬಂಧಪಟ್ಟಂತೆ ಮಾತ್ರ ಮೊದಲನೇ ಹಂತದಲ್ಲಿ ತಾಲ್ಲೂಕು ವ್ಯಾಪ್ತಿಗೆ ಮತ್ತು ಎರಡನೇ ಹಂತದಲ್ಲಿ ಜಿಲ್ಲಾ ಹಂತಕ್ಕೆ (ಆನ್-ಲೈನ್ ನಲ್ಲಿ ಜಿಲ್ಲಾ ಹಂತದಲ್ಲಿ)<br>○ ಪ್ರೌಢಶಾಲಾ ಶಿಕ್ಷಕರ ಹೆಚ್ಚುವರಿ ಶಿಕ್ಷಕರ ಕೌನ್ಸಿಲಿಂಗ್ ಜಿಲ್ಲಾ ಹಂತದಲ್ಲಿ | 18/08/2018<br>ರಿಂದ<br>19/08/2018 | ಉಪನಿರ್ದೇಶಕರು(ಆಡಳಿತ) |
| 9 | ಪ್ರೌಢಶಾಲೆಗಳಿಗೆ ಸಂಬಂಧಪಟ್ಟಂತೆ ಮಾತ್ರ : ಹೆಚ್ಚುವರಿ ಪ್ರಕ್ರಿಯೆ ನಂತರ ಜಿಲ್ಲೆಯಲ್ಲಿ ಉಳಿಯುವ ಅನಗತ್ಯ ಹೆಚ್ಚುವರಿ ಶಿಕ್ಷಕರನ್ನು ವಿಭಾಗದೊಳಗಿನ ಅಗತ್ಯ ಖಾಲಿ ಹುದ್ದೆಗಳಿಗೆ ಹಾಗು ಜಿಲ್ಲೆಗಳಲ್ಲಿ ಶಿಕ್ಷಣ ಸಂಯೋಜಕರು (ಪ್ರೌಢ) ಮತ್ತು ಬಿಆರ್‌ಪಿ (ಪ್ರೌಢ)ರವರ ಕೌನ್ಸಿಲಿಂಗ್ ನಂತರ ಖಾಲಿ ಹುದ್ದೆ ಲಭ್ಯವಿಲ್ಲದೇ ಉಳಿಯುವ ಶಿಕ್ಷಣ ಸಂಯೋಜಕರು (ಪ್ರೌಢ) ಮತ್ತು ಬಿಆರ್‌ಪಿ (ಪ್ರೌಢ)ರವರುಗಳನ್ನು ವಿಭಾಗದೊಳಗಿನ ಖಾಲಿ ಹುದ್ದೆಗಳಿಗೆ ಸ್ಥನಿಯುಕ್ತಿಗೊಳಿಸಲು ಶಿಕ್ಷಕರ ಮಾಹಿತಿಯನ್ನು ಆನ್‌ಲೈನ್ ಕೌನ್ಸಿಲಿಂಗ್ ನಡೆಸಲು ಸಂಬಂಧಿಸಿದ | 20/08/2018 | ಉಪನಿರ್ದೇಶಕರು(ಆಡಳಿತ) |

Scanned by CamScanner

| | | | |
|---|---|---|---|
| | ವಿಭಾಗೀಯ ಸಹ ನಿರ್ದೇಶಕರಿಗೆ ಶಿಕ್ಷಕರ ಸೇವಾ ವಿವರ ಹಾಗೂ ಅಗತ್ಯ ಖಾಲಿ ಹುದ್ದೆ ಮಾಹಿತಿ ಸಲ್ಲಿಸುವುದು. | | |
| | ವಿಭಾಗ ಮಟ್ಟದಲ್ಲಿ ಹೆಚ್ಚುವರಿ ಶಿಕ್ಷಕರ ಕೌನ್ಸಿಲಿಂಗ್ ಪ್ರಕ್ರಿಯೆ. ಪ್ರಥಮ ಆದ್ಯತೆಯನ್ನು ಶಿಕ್ಷಣ ಸಂಯೋಜಕರು(ಪ್ರೌಢ) ಮತ್ತು ಬಿಆರ್‌ಪಿ (ಪ್ರೌಢ)ರವರಿಗೆ ನೀಡುವುದು ಹಾಗು ದ್ವಿತೀಯ ಆದ್ಯತೆ ಮೇರೆಗೆ ಹೆಚ್ಚುವರಿ ಶಿಕ್ಷಕರ ಕೌನ್ಸಿಲಿಂಗ್ ನಡೆಸುವುದು. | 23/08/2018 | ಸಂಬಂಧಿಸಿದ ವಿಭಾಗೀಯ ಸಹ ನಿರ್ದೇಶಕರು |
| 10 | ಕೌನ್ಸಿಲಿಂಗ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಶಿಕ್ಷಕರ ಮಾಹಿತಿಯನ್ನು ಟಿಡಿಎಸ್‌ನಲ್ಲಿ ಅಳವಡಿಸಿ ಕಡ್ಡಾಯ / ಐಚ್ಛಿಕ ವರ್ಗಾವಣೆ ಪಟ್ಟಿಯಿಂದ ಅಂತಹ ಶಿಕ್ಷಕರ ಹೆಸರುಗಳನ್ನು ತೆಗೆಯುವ ಕ್ರಮ. ಶಿಕ್ಷಕರ ಪಟ್ಟಿ ಹಾಗೂ ಅಂಕಿ-ಅಂಶ ಸಹಿತ ವರದಿಯನ್ನು ನಿರ್ದೇಶಕರು(ಪ್ರಾಥಮಿಕ ಶಿಕ್ಷಣ) / ನಿರ್ದೇಶಕರು(ಪ್ರೌಢ) ಇವರಿಗೆ ಸಲ್ಲಿಸುವ ದಿನಾಂಕ. | 25/08/2018 | ಉಪನಿರ್ದೇಶಕರು(ಆಡಳಿತ) |

## ಖ) ಕಡ್ಡಾಯ/ಕೋರಿಕೆ/ಪರಸ್ಪರ ವರ್ಗಾವಣೆಗಳ ಪರಿಷ್ಕೃತ ವೇಳಾಪಟ್ಟಿ-2

| ಕ್ರ.ಸಂ | ವಿವರ | ಪರಿಷ್ಕೃತ ದಿನಾಂಕಗಳು | ಕ್ರಮ ವಹಿಸುವ ಅಧಿಕಾರಿಗಳು |
|---|---|---|---|
| | ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಳ ಕುರಿತು ಕ್ರಮಗಳು | | |
| 1 | ಕೋರಿಕೆ ವರ್ಗಾವಣೆ ಬಯಸುವ ಸರ್ಕಾರಿ ಪ್ರಾಥಮಿಕ / ಪ್ರೌಢ ಶಾಲಾ ಶಿಕ್ಷಕರ ವೃಂದದಿಂದ ಅರ್ಜಿಗಳನ್ನು ಕರೆಯಲು ಕ್ರಮ | ಪ್ರಕ್ರಿಯೆ ಮುಗಿದಿದೆ | 1) ಪ್ರಾಥಮಿಕ ಶಿಕ್ಷಣ ನಿರ್ದೇಶಕರು,<br>2) ಪ್ರೌಢ ಶಿಕ್ಷಣ ನಿರ್ದೇಶಕರು ಆಯುಕ್ತರ ಕಛೇರಿ, ಬೆಂಗಳೂರು<br>3) ಅಪರ ಆಯುಕ್ತರ ಕಛೇರಿ, ಧಾರವಾಡ<br>4) ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ<br>5) ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ ಮೈಸೂರು/ ಆಯುಕ್ತಾಲಯದ ಜಂಟಿ ನಿರ್ದೇಶಕರು, ಧಾರವಾಡ/ಗುಲ್ಬರ್ಗಾ<br>6) ಉಪನಿರ್ದೇಶಕರು, ಆಡಳಿತ, ವಿವಿಧ ಜಿಲ್ಲೆಗಳು<br>7) ಕ್ಷೇತ್ರಶಿಕ್ಷಣಾಧಿಕಾರಿಗಳು, ವಿವಿಧ ವಲಯ/ತಾಲ್ಲೂಕು |
| 2. | ವರ್ಗಾವಣೆ ಕೋರುವ ಸರ್ಕಾರಿ ಪ್ರಾಥಮಿಕ/ಪ್ರೌಢ ಶಾಲಾ ಶಿಕ್ಷಕರ ವೃಂದ, ಇಲಾಖಾ ವೆಬ್ ಸೈಟ್‌ನಲ್ಲಿ ಅಳವಡಿಸಿರುವಂತೆ ಅಂತರ್ಜಾಲದ [on line] ಮೂಲಕ ಇಲಾಖೆ ನಿಗದಿ ಪಡಿಸಿರುವ ನಮೂನೆಯಲ್ಲಿ ಸಂಬಂಧಿಸಿದ ಎಲ್ಲಾ ದಾಖಲೆಗಳ ಸಹಿತ ಅರ್ಜಿ ಸಲ್ಲಿಸಿ ಆನ್-ಲೈನ್ ಸ್ವೀಕೃತಿ ಪಡೆಯಲು ನಿಗದಿಪಡಿಸಿರುವ ಅವಧಿ (ಅರ್ಜಿಯೊಂದಿಗೆ ಸಂಬಂಧಿಸಿದ ದಾಖಲೆಗಳನ್ನು ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲು ಅವಕಾಶ ಕಲ್ಪಿಸಿದ್ದು, ಅಪ್ಲೋಡ್ ಮಾಡುವ ಎಲ್ಲಾ ದಾಖಲೆಗಳ ಸ್ಕ್ಯಾನ್ಡ್ ಪ್ರತಿಗಳು ಸ್ಪಷ್ಟವಾಗಿ ಕಾಣುವಂತೆ ಇರಬೇಕು) | ಪ್ರಕ್ರಿಯೆ ಮುಗಿದಿದೆ | ವರ್ಗಾವಣೆ ಬಯಸುವ ಸರ್ಕಾರಿ ಪ್ರಾಥಮಿಕ ಶಿಕ್ಷಕರ ವೃಂದ |

Scanned by CamScanner

| | | | |
|---|---|---|---|
| 3. | ಆನ್-ಲೈನ್‌ನಲ್ಲಿ ಸಲ್ಲಿಸಿದ ಅರ್ಜಿಯ ಮುದ್ರಿತ ಪ್ರತಿಯನ್ನು ಪಡೆದು, ಶಿಕ್ಷಕರು ತಮ್ಮ ಸಹಿಯನ್ನು ನಮೂದಿಸಿ ಕ್ಷೇತ್ರಶಿಕ್ಷಣಾಧಿಕಾರಿಯವರಿಗೆ ಸಲ್ಲಿಸಲು ನಿಗಧಿ ಪಡಿಸಿರುವ ಅವಧಿ | ಪ್ರಕ್ರಿಯೆ ಮುಗಿದಿದೆ | 1) ಶಿಕ್ಷಕರ ವೃಂದ<br>2) ಕ್ಷೇತ್ರಶಿಕ್ಷಣಾಧಿಕಾರಿಗಳು |
| 4 | ಕ್ಷೇತ್ರಶಿಕ್ಷಣಾಧಿಕಾರಿಗಳ ಹಂತದಲ್ಲಿ ಸೇವಾದಾಖಲೆಗಳೊಂದಿಗೆ ತಾಳೆ ನೋಡಿ ಅಂತರ್ಜಾಲದಲ್ಲಿ [on line] ಅರ್ಜಿಗಳನ್ನು ಪರಿಶೀಲಿಸಿ, ನ್ಯೂನತೆಗಳಿದ್ದಲ್ಲಿ ಸರಿಪಡಿಸಿ ಮಾಹಿತಿಗಳನ್ನು ದೃಢೀಕರಿಸಿ ಅರ್ಜಿಗಳನ್ನು ಆನ್-ಲೈನ್‌ನಲ್ಲಿ ಅನುಮೋದಿಸಲು ಈಗಾಗಲೇ ಸಾಕಷ್ಟು ಕಾಲಾವಕಾಶ ನೀಡಲಾಗಿತ್ತು. ಆದರೂ ಹೆಚ್ಚುವರಿಯಾಗಿ ನಿಗದಿ ಪಡಿಸಿರುವ ಅವಧಿ | 10/08/2018 ರೊಳಗೆ | ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 5 | ಕ್ಷೇತ್ರಶಿಕ್ಷಣಾಧಿಕಾರಿಗಳು, ಸ್ವೀಕೃತ ಅರ್ಜಿಗಳ ಸಂಬಂಧ, ಕ್ರ.ಸಂ. 04 ರಲ್ಲಿನ ಸೂಚನೆಗಳಂತೆ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿ, ಅರ್ಹತೆ ಕುರಿತಂತೆ ದೃಢೀಕೃತ ಶಿಫಾರಸ್ಸಿನೊಂದಿಗೆ ಸಕ್ಷಮ ಪ್ರಾಧಿಕಾರಿಗಳಿಗೆ ಅರ್ಜಿಗಳನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ನಿಗದಿಪಡಿಸಿರುವ ಅವಧಿ. | 22/08/2018 | 1) ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು<br>2) ಸಂಬಂಧಿಸಿದ ಉಪನಿರ್ದೇಶಕರು (ಆಡಳಿತ) |
| | ಕಡ್ಡಾಯ ವರ್ಗಾವಣೆ ಕ್ರಮಗಳು<br>(ಕಡ್ಡಾಯ ವರ್ಗಾವಣೆಗಳ ಕುರಿತಂತೆ ಕ್ಷೇತ್ರಶಿಕ್ಷಣಾದಿಕಾರಿಗಳ/ಉಪನಿರ್ದೇಶಕರ ಹಂತದಲ್ಲಿ ಪೂರ್ವಭಾವಿ ಕ್ರಮಗಳು - ದಿನಾಂಕ 23/08/2018 ರಿಂದ 04/09/2018) | | |
| 6 | ಕಡ್ಡಾಯ ವರ್ಗಾವಣೆಗಳು: ನಿಯಮ 21(3) ರನ್ವಯ-ಮೊದಲನೇ ಹಂತದಲ್ಲಿ ಯಾವುದೇ ತಾಲ್ಲೂಕಿನಲ್ಲಿ ಮಂಜೂರಾದ ವೃಂದಬಲದ ಶೇ 20 ಮತ್ತು ಹೆಚ್ಚಿನ ಖಾಲಿ ಹುದ್ದೆಗಳು ಇರುವ ತಾಲ್ಲೂಕುಗಳಿಗೆ ವಿಶೇಷ ವರ್ಗೀಕರಣದ ಹುದ್ದೆಗಳಲ್ಲಿನ ಶಿಕ್ಷಕರ ಪ್ರಕರಣಗಳಲ್ಲಿ ಕಡ್ಡಾಯ ವರ್ಗಾವಣೆಗಳನ್ನು ಹಮ್ಮಿಕೊಳ್ಳಲು ಪಟ್ಟಿ ಪ್ರಕಟ ಹಾಗು ಸ್ಥಳ ನಿಯುಕ್ತಿ | ಈಗಾಗಲೇ ಪ್ರಕ್ರಿಯೆ ಮುಗಿದಿದೆ | <u>ಪ್ರಾಥಮಿಕ</u><br>ಜಿಲ್ಲಾ ಉಪನಿರ್ದೇಶಕರು(ಆಡಳಿತ)<br>ಸಹಯೋಗ - ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು<br><u>ಪ್ರೌಢ</u><br>ಸಹ ನಿರ್ದೇಶಕರು, ಬೆಂಗಳೂರು/ಮೈಸೂರು ಹಾಗೂ ಸಹ ನಿರ್ದೇಶಕರು ಅಪರ ಆಯುಕ್ತರ ಆಯುಕ್ತಾಲಯ ಗುಲ್ಬರ್ಗ/ಧಾರವಾಡ<br>ಸಹಯೋಗ ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು/ ಜಿಲ್ಲಾ ಉಪನಿರ್ದೇಶಕರು(ಆಡಳಿತ) |
| 7 | 'ಎ'ವಲಯದಲ್ಲಿ 10 ವರ್ಷಕ್ಕಿಂತಲೂ ಹೆಚ್ಚು ಕಾಲ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಪಟ್ಟಿಯನ್ನು, ವರ್ಗಾವಣೆಗೆ ನಿಗದಿಪಡಿಸಿದ ಮಿತಿಗೊಳಪಟ್ಟ ಸಂಖ್ಯೆಯನ್ನು ಗಮನಿಸಿ ಪ್ರಕಟಣಾ ಫಲಕದಲ್ಲಿ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸುವುದು ಹೆಚ್ಚುವರಿ ಶಿಕ್ಷಕರ ಮರುನಿಯುಕ್ತಿ ಪೂರ್ಣಗೊಳಿಸಿದ ನಂತರ ಸದರಿ ಪಟ್ಟಿಯನ್ನು ಅಂತಿಮಗೊಳಿಸುವುದು. | 06/08/2018 ರಿಂದ 25/08/2018 | |
| 8 | 1) ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ಆದ್ಯತಾ ಪಟ್ಟಿ ಪ್ರಕಟಣೆ (ಆನ್-ಲೈನ್)<br>2) 'ಎ' ವಲಯದಲ್ಲಿನ ಶಿಸ್ತು ಪ್ರಕರಣಗಳ ಶಿಕ್ಷಕರ ಪಟ್ಟಿಯನ್ನು ಪ್ರಕಟಿಸುವುದು. | 28/08/2018 | |

Scanned by CamScanner

| | | | |
|---|---|---|---|
| 9 | ವಲಯವಾರು, ವಿಷಯವಾರು ಖಾಲಿ ಹುದ್ದೆಗಳ ವಿವರಗಳನ್ನು ವೆಬ್‌ಸೈಟ್ ನಲ್ಲಿ ಹಾಗೂ ಪ್ರಕಟಣಾ ಫಲಕದಲ್ಲಿ ಪ್ರಕಟಿಸುವುದು (ಹೆಚ್ಚುವರಿ ನಂತರದ ಖಾಲಿ ಹುದ್ದೆ) | 30/08/2018 | |
| | ಕೋರಿಕೆ ವರ್ಗಾವಣೆಗಳು ಮತ್ತು ಪರಸ್ಪರ ವರ್ಗಾವಣೆಗಳ ಮುಂದುವರೆದ ಕ್ರಮಗಳು | | |
| 11 | ಕೋರಿಕೆ ವರ್ಗಾವಣೆ ಬಯಸಿರುವ ಶಿಕ್ಷಕರ ತಾತ್ಕಾಲಿಕ ಅದ್ಯತಾ ಪಟ್ಟಿ (ಘಟಕದ ಒಳಗೆ ಮತ್ತು ಘಟಕದ ಹೊರಗೆ) ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು. | 16/08/2018<br><br>ಘಟಕದ ಹೊರಗೆ<br>18/08/2018 | 1) ಜಿಲ್ಲಾ ಉಪನಿರ್ದೇಶಕರು (ಆಡಳಿತ)<br>2) ವಿಭಾಗೀಯಸಹನಿರ್ದೇಶಕರು, ಬೆಂಗಳೂರು/ಮೈಸೂರು<br>3) ಸಹನಿರ್ದೇಶಕರು ಅಪರ ಆಯುಕ್ತರಾಲಯ ಧಾರವಾಡ ಹಾಗೂ ಗುಲ್ಬರ್ಗ<br>4) ನಿರ್ದೇಶಕರು, ಪ್ರಾಥಮಿಕ ಶಿಕ್ಷಣ.<br>5) ನಿರ್ದೇಶಕರು, ಪೌಢ ಶಿಕ್ಷಣ. |
| 12 | ಪರಸ್ಪರ ವರ್ಗಾವಣೆ ಬಯಸಿರುವ ಶಿಕ್ಷಕರ ತಾತ್ಕಾಲಿಕ ಅದ್ಯತಾ ಪಟ್ಟಿ (ಘಟಕದ ಒಳಗೆ ಮತ್ತು ಘಟಕದ ಹೊರಗೆ) ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು. | 18/08/2018 | 1) ಜಿಲ್ಲಾ ಉಪನಿರ್ದೇಶಕರು (ಆಡಳಿತ)<br>2) ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ಮೈಸೂರು.<br>3) ಸಹನಿರ್ದೇಶಕರು ಅಪರ ಆಯುಕ್ತರಾಲಯ ಧಾರವಾಡ ಹಾಗೂ ಗುಲ್ಬರ್ಗ<br>4) ನಿರ್ದೇಶಕರು ಪ್ರಾಥಮಿಕ ಶಿಕ್ಷಣ.<br>5) ನಿರ್ದೇಶಕರು, ಪೌಢ ಶಿಕ್ಷಣ. |
| 13 | ಕೋರಿಕೆ ಹಾಗೂ ಪರಸ್ಪರ ವರ್ಗಾವಣೆಗಳಿಗೆ ಸಂಬಂಧಿಸಿದ ತಾತ್ಕಾಲಿಕ ಆದ್ಯತಾ ಪಟ್ಟಿಗಳಿಗೆ ಆಕ್ಷೇಪಣೆಗಳನ್ನು (ಘಟಕದ ಹೊರಗೆ ಮತ್ತು ಒಳಗೆ) ಸಲ್ಲಿಸಲು ನಿಗಧಿಪಡಿಸಿರುವ ಅವಧಿ. | 16/08/2018<br>ರಿಂದ<br>20/08/2018 | 1) ಸಂಬಂಧಿಸಿದ ಶಿಕ್ಷಕರು ಹಾಗೂ<br>2) ಕ್ಷೇತ್ರಶಿಕ್ಷಣಾಧಿಕಾರಿಗಳು |
| 14 | ಆಕ್ಷೇಪಣೆಗಳ ಕುರಿತಂತೆ ಕ್ಷೇತ್ರಶಿಕ್ಷಣಾಧಿಕಾರಿಗಳು ಕೋರಿಕೆ / ಪರಸ್ಪರ ಅಭ್ಯರ್ಥಿಗಳಿಂದ ಪಡೆದ ಆದ್ಯತೆಯ ಮೂಲ ಪ್ರಮಾಣ ಪತ್ರಗಳ ಆಧಾರದ ದೃಢೀಕೃತ ಪ್ರತಿಗಳ ಆಧಾರದಲ್ಲಿ ಆಕ್ಷೇಪಣೆಗಳನ್ನು ಸರಿಪಡಿಸಿ ವರ್ಗಾವಣೆ ತಂತ್ರಾಂಶದಲ್ಲಿ ಅನುಮೋದಿಸಿ ಪಟ್ಟಿಯನ್ನು ಸಂಬಂಧಿಸಿದ ಉಪನಿರ್ದೇಶಕರಿಗೆ ದೃಢೀಕೃತ ದಾಖಲೆಗಳೊಂದಿಗೆ ಮುದ್ದಾಂ ಸಲ್ಲಿಸಬೇಕಾದ ದಿನಾಂಕ. (ತಾತ್ಕಾಲಿಕ ಆದ್ಯತಾ ಪಟ್ಟಿಯಲ್ಲಿರುವ ಶಿಕ್ಷಕರುಗಳ ಅರ್ಜಿಗಳನ್ನು, ಆದ್ಯತಾ ಪಟ್ಟಿಗನುಸಾರ ಅದೇ ಕ್ರಮದಲ್ಲಿ ಮಾತ್ರ ವರ್ಗಾವಣಾ ಪ್ರಾಧಿಕಾರಕ್ಕೆ ಸಲ್ಲಿಸುವುದು.) | 23/08/2018 | 1) ಕ್ಷೇತ್ರಶಿಕ್ಷಣಾಧಿಕಾರಿಗಳು<br>2) ಜಿಲ್ಲಾ ಉಪನಿರ್ದೇಶಕರು [ಆಡಳಿತ] |
| 15 | ಅಂತರ್ ಘಟಕ ವರ್ಗಾವಣೆ ಪ್ರಕರಣಗಳಲ್ಲಿ / ಪರಸ್ಪರ ವರ್ಗಾವಣೆ ಪ್ರಕರಣಗಳಲ್ಲಿ, ಉಪನಿರ್ದೇಶಕರು [ಆಡಳಿತ] ಇವರು ಕ್ಷೇತ್ರಶಿಕ್ಷಣಾಧಿಕಾರಿಗಳಿಂದ ಪಡೆದ ಆದ್ಯತೆಯ ದೃಢೀಕೃತ ಪ್ರಮಾಣ ಪತ್ರಗಳನ್ನು, ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರಿಗಳಿಗೆ, ವಿಭಾಗೀಯ | 1) ವಿಭಾಗೀಯ ಸಹನಿರ್ದೇಶಕರಿಗೆ (ವಿಭಾಗದ ಒಳಗಿನ ಅಂತರ್ ಜಿಲ್ಲಾ ವರ್ಗಾವಣೆ ಪ್ರಕರಣಗಳು ಮತ್ತು ಅಂತರ್ ವಿಭಾಗದ | ಪ್ರಾಥಮಿಕ<br><br>1) ಜಿಲ್ಲಾ ಉಪನಿರ್ದೇಶಕರು [ಆಡಳಿತ]<br>2) ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ಮೈಸೂರು<br>3) ಅಪರ ಆಯುಕ್ತಾಲಯದ<br>4) ಸಹನಿರ್ದೇಶಕರು, ಧಾರವಾಡ /ಗುಲ್ಬರ್ಗಾ |

Scanned by CamScanner

| | | | |
|---|---|---|---|
| | ಸಹನಿರ್ದೇಶಕರು/ಅಪರ ಆಯುಕ್ತಾಲಯದ ಸಹ ನಿರ್ದೇಶಕರು ಮತ್ತು ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಇವರಿಗೆ ಮುದ್ದಾಂ ಸಲ್ಲಿಸಬೇಕಾದ ದಿನಾಂಕ (ತಾತ್ಕಾಲಿಕ ಆದ್ಯತಾ ಪಟ್ಟಿಯಲ್ಲಿರುವ ಶಿಕ್ಷಕರುಗಳ ಅರ್ಜಿಗಳನ್ನು ಮಾತ್ರ ವರ್ಗಾವಣಾ ಪ್ರಾಧಿಕಾರಕ್ಕೆ ಸಲ್ಲಿಸುವುದು.) | ವರ್ಗಾವಣೆ ಪ್ರಕರಣಗಳ ಪಟ್ಟಿಯ ಪ್ರತಿ) 24/08/2018<br>2) ನಿರ್ದೇಶಕರು, ಪ್ರಾಥಮಿಕ ಶಿಕ್ಷಣ (ಅಂತರ್ ವಿಭಾಗದ ವರ್ಗಾವಣೆ ಪ್ರಕರಣಗಳು) – 27/08/2018<br>3)ನಿರ್ದೇಶಕರು, ಪೌಢ ಶಿಕ್ಷಣ(ಅಂತರ್ ವಿಭಾಗದ ವರ್ಗವಣೆ ಪ್ರಕರಣಗಳು) – 27/08/2018 | 5) ನಿರ್ದೇಶಕರು, ಪ್ರಾಥಮಿಕ ಶಿಕ್ಷಣ<br>ಪ್ರೌಢ<br>1) ಸಹ ನಿರ್ದೇಶಕರು, ಬೆಂಗಳೂರು/ಮೈಸೂರು<br>2) ಸಹ ನಿರ್ದೇಶಕರು ಅಪರ ಆಯುಕ್ತರ ಆಯುಕ್ತಾಲಯ ಗುಲ್ಬರ್ಗ/ಧಾರವಾಡ<br>3) ನಿರ್ದೇಶಕರು (ಪ್ರೌಢಶಿಕ್ಷಣ) |
| 16 | ಪರಸ್ಪರ ವರ್ಗಾವಣೆಗಳ (ಘಟಕದ ಒಳಗೆ / ಘಟಕದ ಹೊರಗೆ) ಅಂತಿಮ ಆದ್ಯತಾ ಪಟ್ಟಿ ಪ್ರಕಟಣೆ<br>(ಸೂಚನಾ ಫಲಕ/ಇಲಾಖಾ ವೆಬ್‌ಸೈಟ್‌ನಲ್ಲಿ) | 29/08/2018 | ಪ್ರಾಥಮಿಕ<br>1) ಜಿಲ್ಲಾ ಉಪನಿರ್ದೇಶಕರು [ಆಡಳಿತ]<br>2) ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ ಮೈಸೂರು<br>3) ಸಹನಿರ್ದೇಶಕರು, ಧಾರವಾಡ /ಗುಲ್ಬಾರ್ಗಾ<br>4) ನಿರ್ದೇಶಕರು, ಪ್ರಾಥಮಿಕ ಶಿಕ್ಷಣ<br>ಪ್ರೌಢ<br>1) ಸಹ ನಿರ್ದೇಶಕರು, ಬೆಂಗಳೂರು/ಮೈಸೂರು<br>2) ಸಹ ನಿರ್ದೇಶಕರು ಅಪರ ಆಯುಕ್ತರ ಆಯುಕ್ತಾಲಯ ಗುಲ್ಬರ್ಗ/ಧಾರವಾಡ<br>3) ನಿರ್ದೇಶಕರು (ಪ್ರೌಢಶಿಕ್ಷಣ) |
| 17 | ಕೋರಿಕೆ ವರ್ಗಾವಣೆಗೆ ಸಂಬಂಧಿಸಿದಂತೆ ಘಟಕದ ಒಳಗೆ ಪ್ರಾಥಮಿಕ ಶಾಲಾ ಶಿಕ್ಷಕರ ಅಂತಿಮ ಆದ್ಯತಾ ಪಟ್ಟಿ (Final list) ಪ್ರಕಟಣೆ (ಆನ್-ಲೈನ್)<br>ಖಾಲಿ ಹುದ್ದೆಗಳ ಅಂತಿಮ ಪಟ್ಟಿ ಪ್ರಕಟಣೆ (ಸೂಚನಾ ಫಲಕ/ಇಲಾಖಾ ವೆಬ್‌ಸೈಟ್‌ನಲ್ಲಿ) | 29/08/2018 | ಪ್ರಾಥಮಿಕ – ಉಪನಿರ್ದೇಶಕರು(ಆಡಳಿತ)<br>ಪ್ರೌಢ –<br>1) ಸಹ ನಿರ್ದೇಶಕರು, ಬೆಂಗಳೂರು/ಮೈಸೂರು<br>2) ಸಹ ನಿರ್ದೇಶಕರು ಅಪರ ಆಯುಕ್ತರ ಆಯುಕ್ತಾಲಯ ಗುಲ್ಬರ್ಗ/ಧಾರವಾಡ |
| 18 | ಕೋರಿಕೆ ವರ್ಗಾವಣೆಗೆ ಸಂಬಂಧಿಸಿದಂತೆ (ಘಟಕದ ಹೊರಗೆ) ಅಂತಿಮ ಆದ್ಯತಾ ಪಟ್ಟಿ (Final list) ಪ್ರಕಟಣೆ | 29/08/2018 | ಪ್ರಾಥಮಿಕ<br>1)ಆಯುಕ್ತರಕಛೇರಿ, ನಿರ್ದೇಶಕರು(ಪ್ರಾಥಮಿಕ)<br>2)ಸಹನಿರ್ದೇಶಕರು, ಅಪರ ಆಯುಕ್ತರ ಕಛೇರಿ ಧಾರವಾಡ/ಕಲಬುರಗಿ.<br>3).ಸಹನಿರ್ದೇಶಕರು,ಬೆಂಗಳೂರು/ಮೈಸೂರು<br>ಪ್ರೌಢ<br>1)ಆಯುಕ್ತರಕಛೇರಿ, ನಿರ್ದೇಶಕರು(ಪ್ರೌಢ)<br>2)ಸಹನಿರ್ದೇಶಕರು, ಅಪರ ಆಯುಕ್ತರ ಕಛೇರಿ ಧಾರವಾಡ/ಕಲಬುರಗಿ.<br>3).ಸಹನಿರ್ದೇಶಕರು,ಬೆಂಗಳೂರು/ಮೈಸೂರು |

Scanned by CamScanner

| | | | |
|---|---|---|---|
| 19 | ಪ್ರಾಥಮಿಕ/ಪ್ರೌಢ ಶಾಲಾ ಶಿಕ್ಷಕರ ವೃಂದದವರಿಗೆ ಘಟಕದೊಳಗಿನ ಕೋರಿಕೆ ವರ್ಗಾವಣೆಗಳಿಗೆ ಕೌನ್ಸಿಲಿಂಗ್ | | ಪ್ರಾಥಮಿಕ<br>ಜಿಲ್ಲಾ ಉಪನಿರ್ದೇಶಕರು (ಆಡಳಿತ)<br>ಪ್ರೌಢ<br>1) ಸಹನಿರ್ದೇಶಕರು, ಅಪರ ಆಯುಕ್ತರ ಕಛೇರಿ ಧಾರವಾಡ/ಕಲಬುರಗಿ.<br>2) ಸಹನಿರ್ದೇಶಕರು,ಬೆಂಗಳೂರು/ಮೈಸೂರು |
| | 'ಬಿ' ವಲಯದ ಶಿಕ್ಷಕರನ್ನು 'ಎ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ | 31/08/2018 ರಿಂದ 06/09/2018 | |
| | 'ಸಿ' ವಲಯದ ಶಿಕ್ಷಕರನ್ನು 'ಎ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ (ಖಾಲಿ ಹುದ್ದೆಗಳ ಲಭ್ಯತೆಗೊಳಪಟ್ಟು) | | |
| | 'ಸಿ' ವಲಯದ ಶಿಕ್ಷಕರನ್ನು 'ಬಿ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ | | |
| 20 | ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು /ಹಿರಿಯ ಮುಖ್ಯ ಶಿಕ್ಷಕರು/ ವಿಶೇಷ ಶಿಕ್ಷಕರ /ಪ್ರೌಢಶಾಲಾ ವಿಶೇಷ ಶಿಕ್ಷಕರ ವೃಂದದವರಿಗೆ ಘಟಕದೊಳಗಿನ ಕೋರಿಕೆ ವರ್ಗಾವಣೆಗಳಿಗೆ ಕೌನ್ಸಿಲಿಂಗ್ | | ಪ್ರಾಥಮಿಕ<br>ಜಿಲ್ಲಾ ಉಪನಿರ್ದೇಶಕರು (ಆಡಳಿತ)<br>ಪ್ರೌಢ<br>1) ಸಹನಿರ್ದೇಶಕರು, ಅಪರ ಆಯುಕ್ತರ ಕಛೇರಿ ಧಾರವಾಡ/ಕಲಬುರಗಿ.<br>2) ಸಹನಿರ್ದೇಶಕರು,ಬೆಂಗಳೂರು/ಮೈಸೂರು |
| | 'ಬಿ' ವಲಯದ ಶಿಕ್ಷಕರನ್ನು 'ಎ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ | 06/09/2018 ರಿಂದ 07/09/2018 | |
| | 'ಸಿ' ವಲಯದ ಶಿಕ್ಷಕರನ್ನು 'ಎ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ (ಖಾಲಿ ಹುದ್ದೆಗಳ ಲಭ್ಯತೆಗೊಳಪಟ್ಟು) | | |
| | 'ಸಿ' ವಲಯದ ಶಿಕ್ಷಕರನ್ನು 'ಬಿ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ | | |
| | ಕಡ್ಡಾಯ ವರ್ಗಾವಣೆ – ಮುಂದುವರೆದ ಕ್ರಮಗಳು | | |
| 21 | ಕಡ್ಡಾಯ ವರ್ಗಾವಣೆ – ವಿಶೇಷ ವರ್ಗೀಕರಣದ ಹುದ್ದೆಗಳಲ್ಲಿನ ಶಿಕ್ಷಕರ ಪ್ರಕರಣಗಳಲ್ಲಿ ಎ ವಲಯದಲ್ಲಿ ಹತ್ತು ವರ್ಷಗಳ ನಿರಂತರ ಸೇವೆಯನ್ನು ಪೂರೈಸಿರುವ ಶಿಕ್ಷಕರನ್ನು ವಲಯ 'ಎ' ದಿಂದ ವಲಯ 'ಸಿ' ಗೆ ಕಡ್ಡಾಯ ವರ್ಗಾವಣೆ ಕೌನ್ಸಿಲಿಂಗ್ (ಶೇಕಡ 20ಕ್ಕಿಂತ ಹೆಚ್ಚಿನ ಖಾಲಿ ಹುದ್ದೆ ಇರುವ ತಾಲ್ಲೂಕಿಗೆ ಆದ್ಯತೆ) | ಪ್ರಕ್ರಿಯೆ ಮುಗಿದಿದೆ | ಪ್ರಾಥಮಿಕ<br>ಜಿಲ್ಲಾ ಉಪನಿರ್ದೇಶಕರು (ಆಡಳಿತ)<br>ಪ್ರೌಢ<br>1) ಸಹನಿರ್ದೇಶಕರು, ಅಪರ ಆಯುಕ್ತರ ಕಛೇರಿ ಧಾರವಾಡ/ಕಲಬುರಗಿ.<br>2) ಸಹನಿರ್ದೇಶಕರು,ಬೆಂಗಳೂರು/ಮೈಸೂರು |
| 22 | ಕಡ್ಡಾಯ ವರ್ಗಾವಣೆ – ಸೆಕ್ಷನ್ 3ಎ(1)(2) ರಂತೆ | | |
| | 'ಎ' ವಲಯದ ಶಿಕ್ಷಕರನ್ನು 'ಬಿ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ (ಖಾಲಿ ಹುದ್ದೆಗಳ ಲಭ್ಯತೆಗೆ ಒಳಪಟ್ಟು) | 10/09/2018 ರಿಂದ 11/09/2018 | ಪ್ರಾಥಮಿಕ<br>ಜಿಲ್ಲಾ ಉಪನಿರ್ದೇಶಕರು (ಆಡಳಿತ)<br>ಪ್ರೌಢ<br>1) ಸಹನಿರ್ದೇಶಕರು, ಅಪರ ಆಯುಕ್ತರ ಕಛೇರಿ ಧಾರವಾಡ/ಕಲಬುರಗಿ.<br>2) ಸಹನಿರ್ದೇಶಕರು,ಬೆಂಗಳೂರು/ಮೈಸೂರು |
| | 'ಎ' ವಲಯದ ಶಿಕ್ಷಕರನ್ನು 'ಸಿ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ | | |
| 23 | ಕ್ರಿಮಿನಲ್ / ಶಿಸ್ತು ಪ್ರಕರಣಗಳನ್ನೆದುರಿಸುತ್ತಿರುವ ಶಿಕ್ಷಕರ ವರ್ಗಾವಣೆ | 11/09/2018 | ಪ್ರಾಥಮಿಕ<br>ಜಿಲ್ಲಾ ಉಪನಿರ್ದೇಶಕರು (ಆಡಳಿತ)<br>ಪ್ರೌಢ<br>1) ಸಹನಿರ್ದೇಶಕರು, ಅಪರ ಆಯುಕ್ತರ ಕಛೇರಿ ಧಾರವಾಡ/ ಕಲಬುರಗಿ.<br>2) ಸಹನಿರ್ದೇಶಕರು,ಬೆಂಗಳೂರು/ ಮೈಸೂರು |

Scanned by CamScanner

| | | | |
|---|---|---|---|
| | ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಳು – ಮುಂದುವರೆದ ಕ್ರಮಗಳು | | |
| 24 | ಪರಸ್ಪರ ವರ್ಗಾವಣೆಗೆ ಕೌನ್ಸಿಲಿಂಗ್ ಪ್ರಾಥಮಿಕ / ಪ್ರೌಢಶಾಲಾ ಶಿಕ್ಷಕರ ವೃಂದ (ಘಟಕದ ಒಳಗೆ) | 14/09/2018 | ಪ್ರಾಥಮಿಕ<br>ಜಿಲ್ಲಾ ಉಪನಿರ್ದೇಶಕರು (ಆಡಳಿತ)<br><br>ಪ್ರೌಢ<br>1) ಸಹನಿರ್ದೇಶಕರು, ಅಪರ ಆಯುಕ್ತರ ಕಛೇರಿ ಧಾರವಾಡ/ಕಲಬುರಗಿ.<br>2) ಸಹನಿರ್ದೇಶಕರು,ಬೆಂಗಳೂರು/ಮೈಸೂರು |
| 25 | ಪ್ರಾಥಮಿಕ / ಪ್ರೌಢ ಶಾಲಾ ಶಿಕ್ಷಕರ ವೃಂದದವರಿಗೆ ಘಟಕದ ಹೊರಗಿನ ಕೋರಿಕೆ ವರ್ಗಾವಣೆಗಳಿಗೆ ಕೌನ್ಸಿಲಿಂಗ್ | 15/09/2018<br>ರಿಂದ<br>19/09/2018<br>(ವಿಭಾಗದೊಳಗಿನ ಅಂತರ್ ಘಟಕ ಮತ್ತು ವಿಭಾಗದ ಹೊರಗಿನ ಅಂತರ್ ಘಟಕ ವರ್ಗಾವಣೆಗಳಿಗೆ , ವೇಯ್ಟೆಡ್ ಅಂಕಗಳ ಆಧಾರದಲ್ಲಿದ್ದಂತೆ ಒಂದೇ ಆದ್ಯತಾ ಪಟ್ಟಿಯನ್ನು ಅನುಸರಿಸಲಾಗುತ್ತದೆ) | ಪ್ರಾಥಮಿಕ<br>• ವಿಭಾದೊಳಗಿನ ಅಂತರ್ ಜಿಲ್ಲಾ ವರ್ಗಾವಣೆಗಳು – ವಿಭಾಗೀಯ ಸಹ ನಿರ್ದೇಶಕರು (ವಿಭಾಗದ ಕೇಂದ್ರ ಸ್ಥಳದಲ್ಲಿ)<br>• ಅಂತರ್ ವಿಭಾಗದ ವರ್ಗಾವಣೆಗಳು – ವರ್ಗಾವಣಾ ಪ್ರಾಧಿಕಾರಿಯವರು ಆನ್-ಲೈನ್ ನಲ್ಲಿ ಅನುಮೋದಿಸಿರುವ ಪಟ್ಟಿಯನ್ನು ಆಧರಿಸಿ ವಿಭಾಗದ ಕೇಂದ್ರ ಸ್ಥಳದಲ್ಲಿಯೇ ವಿಭಾಗೀಯ ಸಹ ನಿರ್ದೇಶಕರು/ ಅಪರ ಆಯುಕ್ತಾಲಯದ ಸಹನಿರ್ದೇಶಕರು ಅಂತರ್ ವಿಭಾಗೀಯ ವರ್ಗಾವಣೆಗಳನ್ನು ಸಹ ನಿರ್ವಹಿಸುವುದು ಮತ್ತು ಪ್ರಾಥಮಿಕ ಶಿಕ್ಷಣ ನಿರ್ದೇಶಕರು ಮೇಲುಸ್ತುವಾರಿ ಕಾರ್ಯವನ್ನು ಕೈಗೊಳ್ಳುವುದು. ವರ್ಗಾವಣಾ ಆದೇಶದಲ್ಲಿ ನಿರ್ದೇಶಕರ ಮೇಲು ಸಹಿಯನ್ನು ಪಡೆದು ಆದೇಶಗಳನ್ನು ಹೊರಡಿಸತಕ್ಕದ್ದು.<br><br>ಪ್ರೌಢ<br>ನಿರ್ದೇಶಕರು (ಪ್ರೌಢ ಶಿಕ್ಷಣ) |
| 26 | ಪರಸ್ಪರ ವರ್ಗಾವಣೆಗೆ ಕೌನ್ಸಿಲಿಂಗ್‌ಗೆ ಪ್ರಾಥಮಿಕ / ಪ್ರೌಢ ಶಾಲಾ ಶಿಕ್ಷಕರ ವೃಂದ (ಘಟಕದ ಹೊರಗೆ)<br>ಒಂದನೇ ಹಂತದಲ್ಲಿ "ವಿಭಾಗದ ಒಳಗೆ ಎರಡನೇಯ ಹಂತದಲ್ಲಿ" ಅಂತರ್ ವಿಭಾಗ | 21/09/2018<br>ಮತ್ತು<br><br>22/09/2018 | ಪ್ರಾಥಮಿಕ<br>• ವಿಭಾದೊಳಗಿನ ಅಂತರ್ ಜಿಲ್ಲಾ ವರ್ಗಾವಣೆಗಳು – ವಿಭಾಗೀಯ ಸಹ ನಿರ್ದೇಶಕರು (ವಿಭಾಗದ ಕೇಂದ್ರ ಸ್ಥಳದಲ್ಲಿ)<br>• ಅಂತರ್ ವಿಭಾಗದ ವರ್ಗಾವಣೆಗಳು – ವರ್ಗಾವಣಾ ಪ್ರಾಧಿಕಾರಿಯವರು ಆನ್-ಲೈನ್ ನಲ್ಲಿ ಅನುಮೋದಿಸಿರುವ ಪಟ್ಟಿಯನ್ನು ಆಧರಿಸಿ ವಿಭಾಗದ ಕೇಂದ್ರ ಸ್ಥಳದಲ್ಲಿಯೇ ವಿಭಾಗೀಯ ಸಹ ನಿರ್ದೇಶಕರು/ಅಪರ ಆಯುಕ್ತಾಲಯದ ಸಹನಿರ್ದೇಶಕರು |

Scanned by CamScanner

| | | | |
|---|---|---|---|
| | | | ಅಂತರ್ ವಿಭಾಗೀಯ ವರ್ಗಾವಣೆಗಳನ್ನು ಸಹ ನಿರ್ವಹಿಸುವುದು ಮತ್ತು ಪ್ರಾಥಮಿಕ ಶಿಕ್ಷಣ ನಿರ್ದೇಶಕರು / ಪ್ರೌಢಶಾಲಾ ಶಿಕ್ಷಕರು ಮೇಲುಸ್ತುವಾರಿ ಕಾರ್ಯವನ್ನು ಕೈಗೊಳ್ಳುವುದು.<br><br>ಪ್ರೌಢ ನಿರ್ದೇಶಕರು (ಪ್ರೌಢ ಶಿಕ್ಷಣ) |

ಅಡಕ: ಉಲ್ಲೇಖಿತ ಜ್ಞಾಪನಗಳ ಪ್ರತಿಗಳು

(ಡಾ|| ಪಿ.ಸಿ.ಜಾಫರ್, ಭಾ.ಆ.ಸೇ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ,

1. ಸಹ ನಿರ್ದೇಶಕರು, ಬೆಂಗಳೂರು/ಮೈಸೂರು/ಅಪರ ಆಯುಕ್ತರ ಕಛೇರಿ ಕಲ್ಬುರ್ಗಿ/ಧಾರವಾಡ
2. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ
3. ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ (ಉಪನಿರ್ದೇಶಕರ ಮುಖಾಂತರ)
4. ಹಿರಿಯ ಸಹಾಯಕ ನಿರ್ದೇಶಕರು ಹಾಗು ಸಹಾಯಕ ನಿರ್ದೇಶಕರು,, ಇ-ಗೌರ್ನೆನ್ಸ್, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-ಪ್ರಸಕ್ತ ವರ್ಗಾವಣೆಗಳಿಗೆ ಈಗಾಗಲೇ ಸಭೆಯಲ್ಲಿ ಸೂಚಿಸಿರುವಂತೆ 'ತಂತ್ರಾಂಶವನ್ನು' ಸಜ್ಜುಗೊಳಿಸಿ ಅಗತ್ಯ ತಾಂತ್ರಿಕ ಸಹಕಾರವನ್ನು ಒದಗಿಸಲು ಸಂಬಂಧಿತ ತಂಡವನ್ನು ನಿಯೋಜಿಸಲು ಮತ್ತು ವೇಳಾಪಟ್ಟಿಯಂತೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿದೆ. ಹೆಚ್ಚುವರಿ ಶಿಕ್ಷಕರ ಸ್ಥಳನಿಯುಕ್ತಿ ಮತ್ತು ಕಡ್ಡಾಯ ವರ್ಗಾವನೇಗಳಿಗೆ ತಂತ್ರಾಂಶದಲ್ಲಿ ಅಗತ್ಯ ಅಳವಡಿಕೆಗಳನ್ನು ಕಲ್ಪಿಸಿ ಆನ್-ಲೈನ್ ನಲ್ಲಿಯೇ ಪ್ರಕ್ರಿಯನ್ನು ನಿರ್ವಹಿಸಲು ಕ್ರಮಕೈಗೊಳ್ಳತಕ್ಕದ್ದು. ವರ್ಗಾವಣೆ ಪ್ರಕ್ರಿಯೆಗೆ, ಶಾಲಾವಾರು ಹುದ್ದೆಗಳ ವಿಷಯವಾರು ವರ್ಗೀಕರಣ ಮತ್ತು ಆಯಾ ಹುದ್ದೆಗಳಲ್ಲಿ ಮ್ಯಾಪಿಂಗ್ ಮುಖಾಂತರವಾಗಿ ಟಿಡಿಎಸ್‌ನಲ್ಲಿನ ಮಾಹಿತಿಯನ್ನಾಧರಿಸಿದಂತೆ ಲಭ್ಯಪಡಿಸಿರುವ ಶಿಕ್ಷಕರ ಮತ್ತು ಅದೇ ಆಧಾರದಲ್ಲಿ ಖಾಲಿ ಹುದ್ದೆಗಳನ್ನು ವರ್ಗಾವಣೆಗಳಿಗೆ ಲಭ್ಯಪಡಿಸುವ ಬಗ್ಗೆ ಎಲ್ಲಾ ತಾಂತ್ರಿಕ ಕ್ರಮಗಳನ್ನು ಕೈಗೊಳ್ಳಲು ಮತ್ತು ವರದಿ ಮಾಡಲು ಸೂಚಿಸಿದೆ.
5. ಶ್ರೀ ಪುರುಷೋತ್ತಮ ಕುಮಾರ್, ಹಿರಿಯ ಕಾರ್ಯಕ್ರಮಾಧಿಕಾರಿಗಳು , ಸ್ಯಾಟ್ಸ್ (ಡೈಸ್) ಶಾಖೆ , ಇವರಿಗೆ ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು:-

1. ಸರ್ಕಾರದ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ಇವರಿಗೆ ವಂದನಾ ಪೂರ್ವಕವಾಗಿ ಸಲ್ಲಿಸಿದೆ.
2. ಆಪ್ತ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ
6. ಆಪ್ತ ಕಾರ್ಯದರ್ಶಿಯವರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ
7. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ/ಧಾರವಾಡ
8. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ

Scanned by CamScanner

9. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು
10. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು.
11. ಮುಖ್ಯಸ್ಥರು, ಇ-ಗೌರ್ನೆನ್ಸ್, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-ಪ್ರಸಕ್ತ ವರ್ಗಾವಣೆಗಳಿಗೆ ಈಗಾಗಲೇ ಸಭೆಯಲ್ಲಿ ಸೂಚಿಸಿರುವಂತೆ 'ತಂತ್ರಾಂಶವನ್ನು' ಸಜ್ಜುಗೊಳಿಸಿ ಅಗತ್ಯ ತಾಂತ್ರಿಕ ಸಹಕಾರವನ್ನು ಒದಗಿಸಲು ಸಂಬಂಧಿತ ತಂಡವನ್ನು ನಿಯೋಜಿಸಲು ಮತ್ತು ವೇಳಾಪಟ್ಟಿಯಂತೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿದೆ.
12. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ), ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)
13. ರಾಜ್ಯದ ಎಲ್ಲಾ ತಾಲ್ಲೂಕ್ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ
14. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಅಗತ್ಯ ಕ್ರಮಕ್ಕಾಗಿ
15. ಶ್ರೀ ಶಿವಕುಮಾರ್ ಹಾಗು ಶ್ರೀಮತಿ ವಿಜಯ ಅರುಣ, ಹಿರಿಯ ಪ್ರೋಗ್ರಾಮರ್ ಇವರಿಗೆ ಕ್ರಮಕ್ಕಾಗಿ
16. ಶ್ರೀ ನಾಗೇಶ್, ಹಿರಿಯ ಪ್ರೋಗ್ರಾಮರ್, ಡೈಸ್ ಶಾಖೆ ಇವರಿಗೆ ಕ್ರಮಕ್ಕಾಗಿ
17. ಇಲಾಖಾ ವೆಬ್-ಸೈಟ್ನಲ್ಲಿ ರಾಜ್ಯದ ಎಲ್ಲಾ ಶಿಕ್ಷಕರ ಮತ್ತು ಇತರೆ ಸಾರ್ವಜನಿಕರ ಮಾಹಿತಿಗೆ ಪ್ರಕಟಣೆಗೆ
18. ಕಛೇರಿ ಪ್ರತಿ.

Scanned by CamScanner

# <u>ಅನುಬಂಧ – 1</u>

**ಉಪನಿರ್ದೇಶಕರ ಕಛೇರಿ ---------ಜಿಲ್ಲೆ**

**ಧೃಡೀಕರಣ ಪತ್ರ**

ಶ್ರೀ/ಶ್ರೀಮತಿ. -------------------ಆದ ನಾನು ಉಪನಿರ್ದೇಶಕರು (ಆಡಳಿತ) -----------ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿರುವ ---------ಸಂಖ್ಯೆ ಪ್ರಾಥಮಿಕ ಶಾಲಾ ತತ್ಸಮಾನ ವೃಂದದ ಎಲ್ಲಾ ಶಿಕ್ಷಕರ ಸೇವಾ ಮಾಹಿತಿಯನ್ನು **Teacher's Data Software** ತಂತ್ರಾಂಶದಲ್ಲಿ ಸಂಪೂರ್ಣವಾಗಿ ಅಳವಡಿಲಾಗಿದೆ.

ನಮ್ಮ ಜಿಲ್ಲೆಯಲ್ಲಿರುವ ---------ಸಂಖ್ಯೆ ಪ್ರೌಢಶಾಲಾ ತತ್ಸಮಾನ ವೃಂದದ ಎಲ್ಲಾ ಶಿಕ್ಷಕರ ಸೇವಾ ಮಾಹಿತಿಯನ್ನು **Teacher's Data Software** ತಂತ್ರಾಂಶದಲ್ಲಿ ಸಂಪೂರ್ಣವಾಗಿ ಅಳವಡಿಲಾಗಿದೆ.

ನಮ್ಮ ಜಿಲ್ಲೆಯಲ್ಲಿರುವ ---------ಸಂಖ್ಯೆ ಎಲ್ಲಾ ಸರ್ಕಾರಿ ಪ್ರೌಡಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್ – ಬಿ ವೃಂದದ ಅಧಿಕಾರಿಗಳ ಸೇವಾ ಮಾಹಿತಿಯನ್ನು **Teacher's Data Software** ತಂತ್ರಾಂಶದಲ್ಲಿ ಸಂಪೂರ್ಣವಾಗಿ ಅಳವಡಿಲಾಗಿದೆ.

ಈ ಮೇಲೆ ಪ್ರಸ್ತಾಪಿಸಿದ ಎಲ್ಲಾ ಶಿಕ್ಷಕರ ಸೇವಾ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಿರುವುದು ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ. ಹಾಗೂ ನಮ್ಮ ಜಿಲ್ಲೆಯಲ್ಲಿ ಯಾವುದೇ ಪ್ರಾಥಮಿಕ/ಪ್ರೌಢ ಶಾಲಾ ಶಿಕ್ಷಕರ, ಪ್ರೌಢಶಾಲಾ ಮುಖ್ಯ ಶಿಕ್ಷಕರ ಸೇವಾ ಮಾಹಿತಿ ಬಾಕಿ ಉಳಿದಿದ್ದಲ್ಲಿ, ಇಂದಿಕರಿಸದಿದ್ದಲ್ಲಿ(**update**) ನಾನೇ ವೈಯಕ್ತಿಕವಾಗಿ ಜವಾಬ್ದಾರನಾಗಿರುತ್ತೇನೆ.

**ದಿನಾಂಕ:**

**ಸ್ಥಳ:**

**ಉಪನಿರ್ದೇಶಕರು(ಆಡಳಿತ)**
**/ ಕ್ಷೇತ್ರಶಿಕ್ಷಣಾಧಿಕಾರಿಗಳು /**
**ಡಿಡಿಓ**
**(ಮೊಹರು ಮತ್ತು ಹೆಸರು)**

Scanned by CamScanner

# ಅನುಬಂಧ – 2

**ಉಪನಿರ್ದೇಶಕರ ಕಛೇರಿ ---------ಜಿಲ್ಲೆ**

**ದೃಢೀಕರಣ ಪತ್ರ**

ಶ್ರೀ/ಶ್ರೀಮತಿ. ------------------ಆದ ನಾನು ಉಪನಿರ್ದೇಶಕರು (ಆಡಳಿತ) ----------- ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿರುವ --------ಸಂಖ್ಯೆ ಪ್ರಾಥಮಿಕ ಶಾಲಾ ತತ್ಸಮಾನ ವೃಂದದ ಎಲ್ಲಾ ಶಿಕ್ಷಕರ ಸೇವಾ ಮಾಹಿತಿಯನ್ನು **Teacher's Data Software** ತಂತ್ರಾಂಶದಲ್ಲಿ ಸಂಪೂರ್ಣವಾಗಿ ಅಳವಡಿಲಾಗಿದೆ. ದಿನಾಂಕ 07/08/2018ರಂದು ಇರುವಂತೆ ಒಟ್ಟು ---------------- ಸಂಖ್ಯೆಯ ಖಾಲಿ ಹುದ್ದೆಗಳದ್ದು ವರ್ಗಾವಣಾ ತಂತ್ರಾಂಶದಲ್ಲಿ ಪ್ರಕಟಿಸಲಾಗಿದೆ.

ನಮ್ಮ ಜಿಲ್ಲೆಯಲ್ಲಿರುವ --------ಸಂಖ್ಯೆ ಪ್ರೌಢಶಾಲಾ ತತ್ಸಮಾನ ವೃಂದದ ಎಲ್ಲಾ ಶಿಕ್ಷಕರ ಸೇವಾ ಮಾಹಿತಿಯನ್ನು **Teacher's Data Software** ತಂತ್ರಾಂಶದಲ್ಲಿ ಸಂಪೂರ್ಣವಾಗಿ ಅಳವಡಿಲಾಗಿದೆ. ದಿನಾಂಕ 07/08/2018ರಂದು ಇರುವಂತೆ ಒಟ್ಟು ---------------- ಸಂಖ್ಯೆಯ ಖಾಲಿ ಹುದ್ದೆಗಳದ್ದು ವರ್ಗಾವಣಾ ತಂತ್ರಾಂಶದಲ್ಲಿ ಪ್ರಕಟಿಸಲಾಗಿದೆ.

ಈ ಮೇಲೆ ಪ್ರಸ್ತಾಪಿಸಿದ ಎಲ್ಲಾ ಶಿಕ್ಷಕರ ಸೇವಾ ಮಾಹಿತಿಯನ್ನು ಹಾಗು ಖಾಲಿ ಹುದ್ದೆಗಳ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಿರುವುದು ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ. ಹಾಗೂ ನಮ್ಮ ಜಿಲ್ಲೆಯಲ್ಲಿ ಯಾವುದೇ ಪ್ರಾಥಮಿಕ/ಪ್ರೌಢ ಶಾಲಾ ಶಿಕ್ಷಕರ ಸೇವಾ ಮಾಹಿತಿ ಹಾಗು ಖಾಲಿ ಹುದ್ದೆಗಳ ಮಾಹಿತಿ ಬಾಕಿ ಉಳಿದಿದ್ದಲ್ಲಿ, ಇಂದಿಕರಿಸದಿದ್ದಲ್ಲಿ(**update**) ನಾನೇ ವೈಯಕ್ತಿಕವಾಗಿ ಜವಾಬ್ದಾರನಾಗಿರುತ್ತೇನೆ.

**ದಿನಾಂಕ:**

**ಸ್ಥಳ:**

**ಉಪನಿರ್ದೇಶಕರು(ಆಡಳಿತ)**
**/ ಕ್ಷೇತ್ರಶಿಕ್ಷಣಾಧಿಕಾರಿಗಳು /**
**ಡಿಡಿಓ**
**(ಮೊಹರು ಮತ್ತು ಹೆಸರು)**

Scanned by CamScanner